**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |


# ಬೃಹಚ್ಚರಣ


**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – 25,000/- |
| ಪೋಷಕರು | – 5,000/- |
| ಸದಸ್ಯತ್ವ | – 1,000/- |
| ವಾರ್ಷಿಕ ನಿರ್ವಹಣೆ | – 500/- |

ಸಂಪುಟ : 7 ಸಂಚಿಕೆ : 2 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಮಾರ್ಚ್–ಜೂನ್ 2017


## ಅರ್ಪಣೆ



ಈ ಸಂಚಿಕೆಯನ್ನು
ನಮ್ಮ ಸಮುದಾಯದ ಹಿತೈಷಿಗಳು,
ಸಂಘದ ಸ್ಥಾಪಕ ಸದಸ್ಯ ಹಾಗೂ
ಪ್ರಥಮ ಖಜಾಂಚಿ
**ಎಚ್. ಕೃಷ್ಣಸ್ವಾಮಿ**
ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ
ಅರ್ಪಿಸಲಾಗಿದೆ

## ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ ನಮಸ್ಕಾರ.

ಶ್ರಾವಣ, ಭಾದ್ರಪದ ಮಾಸದಲ್ಲಿ ಬರುವ ಎಲ್ಲಾ ಹಬ್ಬ ಗಳಿಗೆ ತಮಗೂ, ತಮ್ಮ ಕುಟುಂಬಕ್ಕೂ ಶುಭವಾಗಲೆಂದು ಹಾರೈಸುತ್ತೇನೆ.

2016–17ರ ಸರ್ವ ಸದಸ್ಯರ ಸಭೆಯು ಸುಗಮವಾಗಿ ನಡೆದಿರುವುದಕ್ಕೆ ತಮ್ಮೆಲ್ಲರ ಸಹಕಾರವೇ ಕಾರಣ ನಮ್ಮ ಚಟುವಟಿಕೆಗಳನ್ನು ತಾವೆಲ್ಲಾ ಮೆಚ್ಚಿ ಆಯ–ವ್ಯಯ ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಅಂಗೀಕರಿಸಿರುವುದೇ ಇದಕ್ಕೆ ಸಾಕ್ಷಿ. ಸಂಘದ ಸದಸ್ಯರಾಗಿದ್ದ ದಿ.ಕೆ.ಟಿ. ಚಂದ್ರಶೇಖರ್‌ರವರ ಕುಟುಂಬದವರು ವಿದ್ಯಾರ್ಥಿಗಳ ಪ್ರೋತ್ಸಾಹಕ್ಕಾಗಿ ವಿಶೇಷ ಇಡುಗಂಟಿನ ಮೂಲಕ ಧನ ಸಹಾಯ ನೀಡಲು ಆಶ್ವಾಸನೆ ನೀಡಿರುತ್ತಾರೆ. ಸಂಘವು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಸಂಘಕ್ಕೆ ಉದಾರವಾಗಿ ದೇಣಿಗೆ ನೀಡುತ್ತಿರುವ ಎಲ್ಲಾ ಸದಸ್ಯರಿಗೂ ವಂದನೆಗಳು, ಸರ್ವ ಸದಸ್ಯರ ಸಭೆಯಲ್ಲಿ ತಾವು ನೀಡಿದ ಸಲಹೆ, ಸೂಚನೆಗಳನ್ನು ಸಂಘವು ಹಂತ– ಹಂತವಾಗಿ ಕಾರ್ಯರೂಪಕ್ಕೆ ತರಲು ಯತ್ನಿಸುತ್ತದೆ.



**ತಮ್ಮವ,**

**■ ಎಸ್. ಸೋಮಸುಂದರ**

## ಸಂಪಾದಕೀಯ

ಸರ್ವ ಸದಸ್ಯರ ಸಭೆಯಲ್ಲಿ ಬೃಹಚ್ಚರಣ ಪತ್ರಿಕೆಯ ಬಗ್ಗೆ ಪ್ರತಿಯೊಬ್ಬರೂ ಮೆಚ್ಚುಗೆ ವ್ಯಕ್ತಪಡಿಸಿರುವುದಕ್ಕೆ ಆಭಾರಿ. ನಮ್ಮ 'ಬೃಹಚ್ಚರಣ' ಪತ್ರಿಕೆಗೆ ಲೇಖನಗಳನ್ನು ಕಳುಹಿಸುತ್ತಿರುವ ಬಂಧುಗಳಿಗೆ ಸಂಪಾದಕ ಮಂಡಳಿಯು ಚಿರಋಣಿ. ತಾವು ಕಳುಹಿಸುವ ಹಸ್ತಪ್ರತಿಗಳನ್ನು ನಮಗೆ ಕಳುಹಿಸುವ ಮೊದಲು ತಾವು ಒಂದು ನಕಲು ಪ್ರತಿಯನ್ನು ತೆಗೆದಿಟ್ಟುಕೊಳ್ಳುವುದು ಸೂಕ್ತ. ತಾವು ಕಳುಹಿಸಿದ ಲೇಖನವನ್ನು ಮತ್ತೆ ತಮಗೆ ಹಿಂದಿರುಗಿಸಲಾಗುವುದಿಲ್ಲ.




ತಮ್ಮವ

**■ ಕೆ.ಸಿ.ನಟರಾಜನ್**

ಸಂಪಾದಕ, 9845113475

## 2016–17ರ ಸರ್ವ ಸದಸ್ಯರ ಸಭೆ ವಿಶೇಷಾಂಕ




**ಬೃಹಚ್ಚರಣ ಬಂಧುಗಳ ಗಮನಕ್ಕೆ**

ನಮ್ಮ ಸಂಘವು 2010ರಲ್ಲಿ ಪುನಃಚೇತನಗೊಂಡ ನಂತರ ಸದಸ್ಯರ ಸಲಹೆ, ಅನಿಸಿಕೆಗಳಂತೆ ವಿವಿಧ, ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರತಿಯೊಂದು ಸದಸ್ಯರ ಆಸಕ್ತಿ, ಪ್ರೋತ್ಸಾಹ, ಸಹಕಾರವೇ ಕಾರಣ. ಸಮುದಾಯದ ಸದಸ್ಯರ ಇಚ್ಛೆಯಂತೆ **ತಾ.01.10.2017ನೇ ಭಾನುವಾರದಂದು** ಬೆಳಗ್ಗೆ 'ಭ್ರಮರಾಂಭ ಮಲ್ಲಿಕಾರ್ಜುನ' ದೇವಾಲಯದ ಆವರಣದಲ್ಲಿ ನಮ್ಮ ಸಮುದಾಯದವರಿಂದ ಸಾಮೂಹಿಕ 'ಸತ್ಯನಾರಾಯಣ ಪೂಜೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಬೃಹಚ್ಚರಣ ಬಂಧುಗಳು ಇದುವರೆಗೂ ಸಂಘದ ಎಲ್ಲ ಕಾರ್ಯಕ್ರಮಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ. ಅದೇರೀತಿಯಲ್ಲಿ ಈ ಕಾರ್ಯಕ್ರಮಕ್ಕೂ ತಾವು ಪ್ರೋತ್ಸಾಹ ನೀಡಲು ತಮ್ಮಲ್ಲಿ ಮನವಿ. ಈ ದೇವತಾ ಕಾರ್ಯಕ್ರಮದ ಸಂಧರ್ಭದಲ್ಲಿ ನಮ್ಮ ಸಮುದಾಯದ ಐವತ್ತು ವರ್ಷಗಳ ವಿವಾಹ ಜೀವನವನ್ನು ಕಳೆದಿರುವ ದಂಪತಿಗಳಿಗೆ ಸಂಘದ ವತಿಯಿಂದ ಸನ್ಮಾನ ಕಾರ್ಯಕ್ರವನ್ನು ಸಹ ಹಮ್ಮಿಕೊಳ್ಳಲಾಗಿದೆ. ನಮ್ಮವರೆಲ್ಲಾ ಈ ವಿಶೇಷ ಕಾರ್ಯಕ್ರಮದಲ್ಲಿ ಭಾಗಿಯಾಗಲು ಈ ಮೂಲಕ ತಮ್ಮಲ್ಲಿ ವಿನಂತಿ. ಕಾರ್ಯಕ್ರಮದ ಪೂರ್ಣ ವಿವರಗಳನ್ನು ತಮಗೆ ಅಂಚೆಯ ಮೂಲಕ ತಿಳಿಸಲಾಗುವುದು.

**ವಿ.ಸೂ:** ಐವತ್ತು ವರ್ಷಗಳ ವೈವಾಹಿಕ ಜೀವನ ಕಳೆದಿರುವ ನಮ್ಮ ಸಮುದಾಯದ 'ದಂಪತಿಗಳ' ವಿವರಗಳು ತಮಗೆ ತಿಳಿದಿದ್ದಲ್ಲಿ ಸಂಘದ ಯಾವುದೇ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ತಿಳಿಸಲು ಮನವಿ.

ಧನ್ಯವಾದಗಳು.



**ವಿ.ಎಸ್. ಮಣಿ**

ಕಾರ್ಯದರ್ಶಿ, ಎಂ.ಎಂ.ಡಿ.ಬಿ.ಎಸ್.

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

### ಕಾರ್ಯಕಾರಿ ಸಮಿತಿ : 2015–2018

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 99001 13298** |
| ಉಪಾಧ್ಯಕ್ಷರು | : | **ಎಚ್.ಕೆ. ಶಶಿಧರ್, 98451 73766** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 98450 55582** |
| ಸಹಕಾರ್ಯದರ್ಶಿ | : | **ಅರುಣ್ ವಿ., 98801 66001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 99809 45699** |
| ಲೆಕ್ಕಪರಿಶೋಧಕರು | : | **ಎಸ್.ಸಿ. ಶ್ರೀನಿವಾಸ, 98453 76949** |
| ಗೌರವ ಸದಸ್ಯರು | : | **ಮಂಜುನಾರಾಯಣ್ ಕೆ. 98861 14279** |
| | | **ಟಿ.ಎಸ್. ಮಣಿ, 98451 76335** |
| | | **ಟಿ.ಎಸ್. ರಮೇಶನ್, 96638 74531** |
| | | **ಟಿ.ಪಿ. ಸೂರ್ಯ ನಾರಾಯಣ, 99454 84268** |
| | | **ಸರಸ್ವತಿ ನಟರಾಜನ್, 94806 19730** |
| | | **ಕೆ. ಜಿ. ವೆಂಕಟೇಶ್, 99640 12687** |
| | | **ಆರ್. ಗಣೇಶ್ ಶ್ರೀಧರ್, 9880187686** |
| | | **ಟಿ. ನಾಗೇಶ್, 99806 62118** |
| | | **ಬಿ.ಎನ್.ಜಿ. ಪ್ರಸಾದ್, 9845128229** |
| | | **ಸುಬ್ರಹ್ಮಣ್ಯಂ ಬೆಂಗಳೂರು, 94498 69667** |
| | | **ಕೆ.ಬಿ.ಎಸ್. ಶರ್ಮ, 94820 87344** |
| | | **ಅನಂತ ಕೆ.ಎಸ್. 97404 44222** |
| | | **ಶಂಕರ ಪ್ರಸಾದ್ ಬಿ.ಆರ್. 98456 63833** |

### ನಿಮ್ಮೊಡನೆ...

ಬೃಹಚ್ಚರಣ ಸಂಘವು ಸಮುದಾಯದವರೆಲ್ಲಾ ಭಾಗವಹಿಸುವಂತೆ ಪ್ರತಿ ವರ್ಷವೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವುದು ತಮಗೆಲ್ಲ ತಿಳಿದ ವಿಷಯ. ಈ ಬಾರಿ ಶಂಕರ ಜಯಂತಿ ಯಂದು ನಮ್ಮ ಸಮುದಾಯದ ಸಂಗೀತ ಕಲಾವಿದರೇ ಉತ್ತಮವಾದ ಕಾರ್ಯಕ್ರಮವನ್ನು ಶ್ರೀಮತಿ ಸರಸ್ವತಿ ನಟರಾಜ್‌ರವರ ನೇತೃತ್ವದಲ್ಲಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಶ್ರೀ ಶಂಕರಾಚಾರ್ಯರ ಸನ್ನಿಧಿಯಲ್ಲಿ ನಡೆಸಿಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು.



ಸಂಘವು ಸಮುದಾಯದವರೆಲ್ಲಾ ಭಾಗವಹಿಸುವಂತೆ ಸಾಮೂಹಿಕ ಸತ್ಯನಾರಾಯಣ ಪೂಜೆಯನ್ನು ಹಮ್ಮಿ ಕೊಂಡಿದೆ. ಈ ಸಂದರ್ಭದಲ್ಲಿ ವೈವಾಹಿಕ ಜೀವನದಲ್ಲಿ 50 ವರ್ಷ ಕಳೆದ ದಂಪತಿ ಗಳಿಗೆ ಸನ್ಮಾನ ಮಾಡಲು ತೀರ್ಮಾನಿಸಿದೆ. ತಾವುಗಳು ಇದರಲ್ಲಿ ಭಾಗವಹಿಸಬೇಕಾಗಿ ಕೋರಿಕೆ. ಈ ಬಾರಿಯ ಸರ್ವ ಸದಸ್ಯರ ಸಭೆಗೆ ಸದಸ್ಯರುಗಳ ಗೈರುಹಾಜರಿ ಹೆಚ್ಚಾಗಿದ್ದು, ನನ್ನ ಮನಸ್ಸಿಗೆ ನೋವಾಗಿದೆ. ತಮ್ಮ ಸಲಹೆ, ಸೂಚನೆಗಳಿಗೆ ನೇರವಾಗಿ ಇರುವ ವೇದಿಕೆಯನ್ನು ಉಪಯೋಗಿಸಿಕೊಳ್ಳಲಿಲ್ಲವೆಂಬ ಖೇದ. ಮುಂಬರುವ ದಿನಗಳಲ್ಲಿ ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಿರೆಂಬ ನಂಬಿಕೆ ಇದೆ. ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ 500 ರೂಪಾಯಿಗಳನ್ನು ನೀಡಬೇಕಾಗಿ ಕೋರಿಕೆ.

**ತಮ್ಮವ,**

**■ ಎಸ್. ಸೋಮಸುಂದರ**

## ಅರ್ಪಣೆ : ಎಚ್. ಕೃಷ್ಣಸ್ವಾಮಿ



ನಮ್ಮ ಬೃಹಚ್ಚರಣ ಸಂಘದ ಸ್ಥಾಪಕ ಸದಸ್ಯ ಹಾಗೂ ಪ್ರಥಮ ಖಜಾಂಚಿಯಾಗಿ ಸೇವೆ ಸಲ್ಲಿಸಿರುವ ಶ್ರೀ ಎಚ್. ಕೃಷ್ಣಸ್ವಾಮಿಯವರಿಗೆ ಈ ಸಂಚಿಕೆಯನ್ನು ಅರ್ಪಿಸುತ್ತಿದ್ದೇವೆ.

ಶ್ರೀಯುತರು ಹೊಸಳ್ಳಿ ಶ್ಯಾನುಭೋಗರಾದ ಲೇ.ಹೆಚ್. ಶ್ರೀನಿವಾಸಯ್ಯ, ಅಮ್ಮಯ್ಯಮ್ಮ ದಂಪತಿಗಳಿಗೆ 25.04. 1934ರಂದು ಜನಿಸಿದರು. ಪದ್ಮಾವತಮ್ಮ, ಸತ್ಯಮೂರ್ತಿ, ಜಯಮ್ಮ, ಗೋಪಾಲಸ್ವಾಮಿ, ಸುವರ್ಣ ಇವರುಗಳು ಒಡಹುಟ್ಟಿದವರು.

ಶ್ರೀಮತಿ ವಿಜಯಲಕ್ಷ್ಮಿ ಅವರೊಂದಿಗೆ 10.05.1958ರಲ್ಲಿ ವಿವಾಹ. ಸಂಘದ ಉಪಾಧ್ಯಕ್ಷ ಶ್ರೀ ಹೆಚ್.ಕೆ. ಶಶಿಧರ್ ಅವರೂ ಸೇರಿದಂತೆ, ರವಿಕಿರಣ್, ನಂದಕುಮಾರ್ ಗಂಡು ಮಕ್ಕಳು ಹಾಗೂ ಜಲಜ ಪ್ರಕಾಶ್, ಸಂಧ್ಯಾ ನಾಗರಾಜ್, ಹೇಮ ಕೆ. ಚಂದ್ರ ಹೆಣ್ಣು ಮಕ್ಕಳು ಹಾಗೂ ಮೊಮ್ಮಕ್ಕಳ ಕುಟುಂಬ. ಬೃಹಚ್ಚರಣ ಸಂಘವು ಪ್ರಾರಂಭವಾದ ದಿನದಿಂದ ನಮ್ಮನ್ನಗಲುವವರೆಗೆ ಸಂಘದ ವಿವಿಧ ಕಾರ್ಯಚಟುವಟಿಕೆ ಗಳಲ್ಲಿ ತಪ್ಪದೆ ಭಾಗವಹಿಸಿ, ಯುವಕರನ್ನು ಎಲ್ಲ ಕಾರ್ಯಗಳಲ್ಲಿಯೂ ಹುರಿದುಂಬಿಸುತ್ತಿದ್ದರು. ಸ್ನೇಹಮಯಿಯಾಗಿದ್ದ ಶ್ರೀಯುತರು ಎಲ್ಲರಿಗೂ, ಸಂಸಾರದಲ್ಲಿ ಜೀವ ವಿಮೆ ಹೇಗೆ ಭದ್ರತೆ ನೀಡುತ್ತದೆ ಎಂಬ ವಿವರ ನೀಡುತ್ತಿದ್ದುದು ಸಾಮಾನ್ಯ. ವಾಣಿಜ್ಯಶಾಸ್ತ್ರದಲ್ಲಿ ಪರಿಣತಿ ಪಡೆದ ಮೇಲೆ, "ಭಾರತೀಯ ಜೀವವಿಮಾ ನಿಗಮದಲ್ಲಿ' ವೃತ್ತಿ ಜೀವನ. ನಿಗಮದ ಅಭಿವೃದ್ಧಿ ಅಧಿಕಾರಿಯಾಗಿ ಭಾರತದ ಪ್ರಾಂತೀಯ ಮತ್ತು ವಿಭಾಗೀಯ ಹಂತಗಳಲ್ಲಿ ಕಾರ್ಯ ಸಾಧನೆಯನ್ನು ದಾಖಲಿಸಿದ್ದಾರೆ.

ಜೀವವಿಮಾ ಸಂಸ್ಥೆಯ ಬೆಳ್ಳಿ ಪಾರಿತೋಷಕದ ಜೊತೆಯಲ್ಲಿ 'ಕೋಟಿಪತಿ' ಎಂಬ ಗೌರವವನ್ನೂ ಸ್ವೀಕರಿಸಿದ್ದಾರೆ. 1992ರಲ್ಲಿ ನಿವೃತ್ತಿ ಹೊಂದಿದ್ದರೂ ಹೆಚ್ಚಿನ ವಿಮಾ ವಹಿವಾಟು ನಿರ್ವಹಿಸಿರುವುದಕ್ಕೆ 'ಬೇರ್ಮನ್ಸ್ ಕ್ಲಬ್' ಸದಸ್ಯತ್ವ ನೀಡಿ ಗೌರವಿಸುವುದರೊಂದಿಗೆ 'ಏಜೆಂಟ್ ರತ್ನ' ಎಂಬ ಬಿರುದನ್ನೂ ಸಹ ವಿಮಾ ನಿಗಮ ನೀಡಿರುತ್ತದೆ.

ಶ್ರೀಯುತರು ಲೇಖಕರು ಹಾಗೂ ಪುಸ್ತಕ ಪ್ರೇಮಿಯಾಗಿದ್ದು, ಇವರ ಪುಸ್ತಕ ಭಂಡಾರದಲ್ಲಿ ವಿವಿಧ ಅಪರೂಪದ ಪುಸ್ತಕಗಳಿವೆ. ಸಹಕಾರಿ, ಸಜ್ಜನ, ಸಾದಾ ಮನುಷ್ಯರಾಗಿ ಸರಳ ಜೀವನ ನಡೆಸಿ, ಯುವ ಜನಾಂಗಕ್ಕೆ ಮಾರ್ಗದರ್ಶಿಗಳಾಗಿದ್ದಲ್ಲದೆ, ನಮ್ಮ ಸಮುದಾಯದ ಏಳಿಗೆಗೆ ಸದಾ ಚಿಂತಿಸುತ್ತಿದ್ದ, ನಮ್ಮನ್ನಗಲಿದ ಹಿರಿಯ ಕೃಷ್ಣಸ್ವಾಮಿಯವರಿಗೆ ಶ್ರದ್ಧಾಂಜಲಿ ಯೊಂದಿಗೆ, ಗೌರವ ಸೂಚಕವಾಗಿ ಈ ಸಂಚಿಕೆಯನ್ನು ಅರ್ಪಿಸುತ್ತಿದ್ದೇವೆ.



# 2016–17ರ ಸರ್ವ ಸದಸ್ಯರ ಸಭೆಯ ವರದಿ

ಮೈಸೂರು ದ್ರಾವಿಡ ಬೃಹಚ್ಚರಣ ಸಂಘದ 2016–2017ರ ಸರ್ವ ಸದಸ್ಯತ್ವ ಸಭೆಯು ದಿ. 16.07.2017ರಂದು ಬಸವನಗುಡಿಯ ಕುಕ್ಕೆ ಸುಬ್ರಹ್ಮಣ್ಯ ಮಠದ ಸಭಾಂಗಣದಲ್ಲಿ ನಡೆಯಿತು. ಈ ಬಾರಿಯ ಪ್ರತಿಭಾ ಪುರಸ್ಕೃತ ಚಿ. ಸಂಪದರವರ ಪ್ರಾರ್ಥನೆಯೊಂದಿಗೆ ಸಭೆ ಪ್ರಾರಂಭವಾಯಿತು. ಸಂಘದ ಉಪಾಧ್ಯಕ್ಷರಾದ ಶ್ರೀ ಎಚ್.ಕೆ. ಶಶಿಧರ್ ರವರು ಸಂಘದ ಅಧ್ಯಕ್ಷರಾದ ಶ್ರೀ ಸೋಮಸುಂದರ, ಕಾರ್ಯದರ್ಶಿ ಗಳಾದ ಶ್ರೀ ವಿ.ಎಸ್. ಮಣಿ ಮತ್ತು ಖಜಾಂಚಿಗಳಾದ ಶ್ರೀ ಸತ್ಯನಾರಾಯಣ್ ರವರನ್ನು ವೇದಿಕೆಗೆ ಆಹ್ವಾನಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಸೋಮ ಸುಂದರರರವರು ಬೃಹಚ್ಚರಣ ಭಾಷೆಯಲ್ಲಿ ಸಭಿಕರನ್ನು, ಸದಸ್ಯರನ್ನು, ಹಿರಿಯ ಚೇತನ ಗೌರವಾನ್ವಿತರನ್ನು, ಪ್ರತಿಭಾ ಪುರಸ್ಕೃತರನ್ನು ಸ್ವಾಗತಿಸಿ, ಸಂಘವು ಈವರೆಗೆ ಬೆಳೆದು ಬಂದ ರೀತಿಯನ್ನು ತಿಳಿಸಿದರು. ಸಂಘಕ್ಕೆ ಪುನರ್ಜೀವ ಕೊಟ್ಟ ಸದಸ್ಯರನ್ನು ಸ್ಮರಿಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀ ಶಶಿಧರ್‌ರವರು ನಮ್ಮನ್ನು ಅಗಲಿದವರ ವಿವರಗಳನ್ನು ತಿಳಿಸಿದರು. ಸಭೆಯಲ್ಲಿ ಅವರುಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಂಘದ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿಯವರು ಸಂಘದ ಕಳೆದ ಸಾಲಿನ ಕಾರ್ಯ ಚಟುವಟಿಕೆಗಳು, ಕೈಗೊಂಡ ಕಾರ್ಯಕ್ರಮಗಳು, ಮುಂದೆ ಮಾಡಬೇಕಾಗಿರುವ ಚಟುವಟಿಕೆಗಳ ಬಗ್ಗೆ ಪ್ರಾಸ್ತಾವಿಕ ನುಡಿಯಲ್ಲಿ ವಿವರಿಸಿದರು. ಹಿಂದಿನ ಸರ್ವ ಸದಸ್ಯರ ಸಭೆಯಲ್ಲಿ ಪೋಷಕರಾದ ರಾಜಗೋಪಾಲ್‌ರವರ ಸಲಹೆಯಂತೆ ಗುರುವಂದನಾ ಕಾರ್ಯಕ್ರಮ, ಸಂಗೀತ ಕಾರ್ಯಕ್ರಮ ನಡೆದಿದ್ದು, ಕಿತ್ತಿಗಾನಹಳ್ಳಿಯಲ್ಲಿನ ನಾಗಾರಾಧನೆ, ವಾರ್ಷಿಕ ಒಂದು ದಿನದಪ್ರವಾಸ ಕೈಗೊಂಡಿದ್ದು ತಿಳಿಸಿದರು. ವಾರ್ಷಿಕ ವೆಚ್ಚ 500 ರೂಗಳನ್ನು ನೀಡಲು ವಿನಂತಿಸಿದರು.

ಹಿಂದಿನ ವರ್ಷದ ಆಯವ್ಯಯ ಲೆಕ್ಕವನ್ನು ಖಜಾಂಚಿ ಯವರಾದ ಶ್ರೀ ಸತ್ಯನಾರಾಯಣ್‌ರವರು ಮಂಡಿಸಲು, ಸರ್ವಾನು ಮತದಿಂದ ಸರ್ವ ಸದಸ್ಯರೂ ಕೈ ಎತ್ತುವ ಮೂಲಕ ಅನುಮೋದಿಸಿ ದೃಢೀಕರಿಸಿದರು. ಲೆಕ್ಕಪತ್ರ ಪರಿಶೋಧಕರಾದ ಹಾಗೂ ಸಂಘದ ಸದಸ್ಯರಾದ ಶ್ರೀ ಬಿ.ಎನ್.ಜಿ. ಕುಮಾರ್‌ರವರು ಪ್ರತಿ ವರ್ಷದಂತೆ ಈ ಬಾರಿಯೂ ಉಚಿತವಾಗಿ ಲೆಕ್ಕ ಪತ್ರಗಳನ್ನು ಪರಿಶೋಧನೆಯ ಸೇವೆ ನೀಡುತ್ತಿರುವುದಕ್ಕೆ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘದ ಸದಸ್ಯತ್ವ ಹೆಚ್ಚಾಗಿ ಮುಂದಿನ ಪೀಳಿಗೆಯವರು ಸದಸ್ಯರಾದರೆ ಸಂಘವು ಬೆಳೆಯಲು ಸಹಾಯವಾಗುತ್ತದೆ ಎಂದರು. ಸಂಘದ ಕಾರ್ಯಕಾರಿ ಸಮಿತಿಯು ತೀರ್ಮಾನಿಸಿದಂತೆ ಸಂಘದಿಂದ ಸಾಮೂಹಿಕ 'ಸತ್ಯನಾರಾಯಣ ಪೂಜೆ' ಹಮ್ಮಿಕೊಳ್ಳುವ ಅಭಿಪ್ರಾಯ ವ್ಯಕ್ತಪಡಿಸಲಾಯಿತು. ಅಂದಿನ ಸಭೆಯಲ್ಲಿ ನಮ್ಮ ಸಮುದಾಯದ 50 ವರ್ಷ ವೈವಾಹಿಕ ಜೀವನ ಕಳೆದಿರುವ ದಂಪತಿಗಳಿಗೆ ಸನ್ಮಾನ ಮಾಡುವ ಕಾರ್ಯಕ್ರಮವನ್ನು ನಡೆಸಲು ತೀರ್ಮಾನಿಸಿದರು.

75 ವರ್ಷ ತುಂಬಿದ ಸಮುದಾಯದ ಹಿರಿಯರನ್ನು ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಸರಸ್ವತಿ ನಟರಾಜನ್‌ರವರು ಸಭೆಗೆ ಪರಿಚಯಿಸಿದ್ದು, ಹಿರಿಯ ಸದಸ್ಯರಾದ ಶ್ಲಾವಕನಹಳ್ಳಿ ಶ್ರೀನಿವಾಸ್ ರವರು ಗೌರವಿಸಿದರು. ಪ್ರೌಢಶಾಲೆ, ಪದವಿ ಪೂರ್ವ, ಪದವಿ ಪರೀಕ್ಷೆ ಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ಪ್ರತಿಭಾ ವಿದ್ಯಾರ್ಥಿಗಳನ್ನು ಸಂಘದ ಪೋಷಕಿ ಶ್ರೀಮತಿ ಲಲಿತಾ ರಮೇಶ್‌ರವರು ಸಭೆಗೆ ಪರಿಚಯಿಸಿದ್ದು, ಹಿರಿಯ ಸದಸ್ಯರಾದ ಶ್ರೀ ಬಿ.ಎನ್.ಜಿ. ಪ್ರಸಾದ್, ಹೆಚ್.ಕೆ. ಶಶಿಧರ್, ಆರ್. ಭಗವಾನ್ ಮತ್ತು ಸತ್ಯನಾರಾಯಣ ಮತ್ತು ಮುತ್ತುಸ್ವಾಮಿಯವರು ವಿದ್ಯಾರ್ಥಿಗಳನ್ನು ಪುರಸ್ಕರಿಸಿದರು.

ಗೌರವಿಸಲ್ಪಟ್ಟ ಹಿರಿಯ ಚೇತನರ ಪರವಾಗಿ ಸದಸ್ಯ ವೆಂಕಟ ಸುಬ್ಬರಾವ್‌ರವರು ಮಾತನಾಡಿ ಸಂಘದ ಕಾರ್ಯ ಚಟುವಟಿಕೆಳನ್ನು ಶ್ಲಾಘಿಸಿದರು. ಪ್ರತಿಭಾ ಪುರಸ್ಕಾರ ಸ್ವೀಕರಿಸಿದ ವಿದ್ಯಾರ್ಥಿಗಳ ಪರವಾಗಿ ಚಿ. ಬೃಂದಾರವರು ಸಂಘದ ಕಾರ್ಯಕ್ಕೆ ಮೆಚ್ಚುಗೆ ಸೂಚಿಸಿ ತಾನೂ ವಿದ್ಯಾಭ್ಯಾಸದ ನಂತರ ಸಂಘದ ಸದಸ್ಯಳಾಗುವುದಾಗಿ ತಿಳಿಸಿದರು. ಸಂಘದ ಸದಸ್ಯರಾದ ಎಂ.ಪಿ. ರಂಗನಾಥ್, ಜಿ.ಎಸ್. ಸತ್ಯಮೂರ್ತಿ, ಬಿ.ಎಸ್. ಪದ್ಮನಾಭ್ ಮತ್ತು ಸೂರ್ಯನಾರಾಯಣ್ ವೆಂಕಟೇಶ್ ಮೂರ್ತಿ, ಎನ್.ವಿ. ಸುಂದರ್‌ರವರು ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಸಂತಸ ವ್ಯಕ್ತಪಡಿಸಿ, 'ಬೃಹಚ್ಚರಣ' ಪತ್ರಿಕೆ ಬಗ್ಗೆ ಮೆಚ್ಚುಗೆ ಸೂಚಿಸಿದರು. ಕೆಲವು ಸಲಹೆಗಳನ್ನು ಸಭಿಕರಿಗೆ ತಿಳಿಸಿ, ಸಂಘಕ್ಕೆ ಶುಭ ಕೋರಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಟಿ.ಎಸ್. ರಮೇಶನ್ ರವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಭೋಜನ ವ್ಯವಸ್ಥೆ ಏರ್ಪಡಿಸಿತ್ತು.

ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಅನಂತರವರು ಕಾರ್ಯಕ್ರಮ ನಿರೂಪಿಸಿದರು.





ಕಾರ್ಯಕಾರಿ ಸಮಿತಿ ಸದಸ್ಯರು

# 2016-17ರ ಸರ್ವ ಸದಸ್ಯರ ಸಭೆಯ ಛಾಯಾಚಿತ್ರಗಳು




ಬಿ.ಎನ್.ಜಿ. ಪ್ರಸಾದ್‌ರವರಿಂದ ದೇವಸ್ತುತಿ




ಕುಮಾರಿ ಸಂಪದ ಪ್ರಾರ್ಥನೆ



ಅಧ್ಯಕ್ಷ ಸೋಮಸುಂದರ್‌ಅವರಿಂದ ಸ್ವಾಗತ





ಕಾರ್ಯದರ್ಶಿ ವಿ.ಎಸ್. ಮಣಿಯವರಿಂದ ಪ್ರಾಸ್ತಾವಿಕ ನುಡಿ





ಉಪಾಧ್ಯಕ್ಷ ಹೆಚ್.ಕೆ. ಶಶಿಧರ್‌ಅವರಿಂದ ಶ್ರದ್ಧಾಂಜಲಿ








ಖಜಾಂಚಿ ಸತ್ಯನಾರಾಯಣ ಅವರಿಂದ ಆಯವ್ಯಯ ಮಂಡನೆ



ಶ್ರೀಮತಿ ಸರಸ್ವತಿ ನಟರಾಜ್ ಅವರಿಂದ ಹಿರಿಯ ಚೇತನರ ಪರಿಚಯ



ಸನ್ಮಾನಿತ ಹಿರಿಯ ಚೇತನರು



ಪೋಷಕ ಶ್ರೀ ಬಿ.ಎನ್. ಪದ್ಮನಾಭ




ಪೋಷಕ ಶ್ರೀ ಸೂರ್ಯನಾರಾಯಣ








ಸತ್ಯಮೂರ್ತಿ ವೆಂಕಟೇಶಮೂರ್ತಿ ಸುಂದರ್ ಎಂ.ಪಿ. ರಂಗನಾಥ ಕು. ಬೃಂದಾ ವೆಂಕಟಸುಬ್ಬರಾವ್

# 2016–17ರ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳು















ಅನಂತ್ ಅವರಿಂದ ನಿರೂಪಣೆ




ವಂದನಾರ್ಪಣೆ ಟಿ.ಎಸ್. ರಮೇಶನ್‌ಅವರಿಂದ





*ಸಂಘದ ಸದಸ್ಯರಿಂದ ಸಹಭೋಜನ*

# ಮಂಕುತಿಮ್ಮನ ಕಗ್ಗ

**ಕ್ಷಮೆ ದೋಷಿಗಳಲಿ, ಕೆಚ್ಚೆದೆ ವಿಧಿಯ ಬಿರುಬಿನಲಿ, ಸಮತೆ ನಿರ್ಮತ್ಸರತೆ ಸೋಲ್ಗೆಲುವುಗಳಲಿ ಶಮವನೀಂ ಗಳಿಸಲೀ ನಾಲ್ಕು ತಪಗಳೇ ಸಾಕು, ಭ್ರಮೆಯೋ ಮಿಕ್ಕೆಲ್ಲ ತಪ** –ಮಂಕುತಿಮ್ಮ

ಭಗವಂತನು ನೀಡಿದ ಈ ಜೀವನ ಸುಗಮವಾಗಿರಬೇಕಾದರೆ ಮನಸ್ಸು ನೆಮ್ಮದಿಯಿಂದಿರಬೇಕು. ಮನೋನಿಗ್ರಹ ಶಕ್ತಿಯಿರಬೇಕು.

ಮನಸ್ಸು ಒಂದು ಹುಚ್ಚು ಕುದುರೆಯಿದ್ದಂತೆ. ಅದಕ್ಕೆ ತಲೆ ಬಾಗಿದರೆ ಮತಿಹೀನರಾಗುತ್ತೇವೆ. ಮತಿಹೀನರಾದಂತೆಲ್ಲಾ ನಮ್ಮ ಮನಸ್ಸು, ಕೆಲಸ, ಗುಣಸ್ವಭಾವಗಳನ್ನು ಸರಿಯಾದ ಮಾರ್ಗದಲ್ಲಿ ನಡೆಸಲಾಗುವುದಿಲ್ಲ. ಇದನ್ನು ತಪ್ಪಿಸಲು ಮನಸ್ಸನ್ನು ಹತೋಟಿಯಲ್ಲಿಡಬೇಕು. ಇದಕ್ಕೆ ಬಹಳ ಸಾಧನೆ ಬೇಕು. ಸಾಧನೆ ಮಾಡಿದಂತೆಲ್ಲಾ ನಾವು ಪರಿಪಕ್ವಗೊಳ್ಳುತ್ತೇವೆ. ಸಜ್ಜನರಾಗುತ್ತೇವೆ. ಸೌಜನ್ಯದಿಂದ ವರ್ತಿಸುತ್ತೇವೆ. ವ್ಯವಹರಿಸುತ್ತೇವೆ. ಇದನ್ನೇ ತಪಸ್ಸು ಎನ್ನಬಹುದು. ನಾಲ್ಕು ವಿಧವಾದ ತಪಸ್ಸು ಶ್ರೇಷ್ಠ–ಮಿಕ್ಕೆಲ್ಲವೂ 'ಭ್ರಮೆ' ಎಂದಿದ್ದಾರೆ ತಿಮ್ಮಗುರು. ಆ ನಾಲ್ಕು ವಿಧವಾದ ತಪ ಯಾವುದೆಂದರೆ ಕ್ಷಮೆ–ಕೆಚ್ಚದೆ, ಸಮತೆ ಹಾಗೂ ನಿರ್ಮತ್ಸರತೆ–ಶಮ

ದೋಷ ಅಥವಾ ತಪ್ಪು ಮಾಡದ ಮನುಷ್ಯರಿಲ್ಲ. `Err is human' ಇಂದು ಇಂಗ್ಲಿಷ್‌ನಲ್ಲಿ ಹೇಳುತ್ತಾರೆ. ತ್ರಿಗುಣಗಳ ಪ್ರಭಾವದ ಕಾರಣದಿಂದ ಮನುಷ್ಯ ಅಜ್ಞಾನದಿಂದ ತಪ್ಪಿತಸ್ಥನಾಗುತ್ತಾನೆ. ತಪ್ಪು ಮಾಡಿದ ಮನುಷ್ಯರನ್ನು ಕಂಡಾಗ ಅವರನ್ನು ಹೀಯಾಳಿಸದೆ, ದೂಷಿಸದೆ, ಹಂಗಿಸದೇ ಇರಬೇಕು. ಅವನು ತಪ್ಪಿತಸ್ಥನೆಂದು ನಾವು ಭಾವಿಸಿದಗ, ಅದು ಮನಸ್ಸಿನ ಕೊಳೆಗೆ ಕಾರಣವಾಗುತ್ತದೆ. ನಾವೂ ಮನುಷ್ಯರೇ, ನಮ್ಮಿಂದಲೂ ತಪ್ಪಾಗಬಹುದು. ಎನ್ನುವ ಜ್ಞಾನದಿಂದ ಅವರನ್ನು ಕ್ಷಮಿಸುವ ಗುಣ ನಮ್ಮದಾಗಿಸಿಕೊಳ್ಳಬೇಕು. ಇದು ಒಂದು ರೀತಿಯ ತಪಸ್ಸು.

ನಂತರ ಕೆಚ್ಚೆದೆಯ ತಪದ ಬಗ್ಗೆ ಡಾ. ಡಿ.ವಿ.ಜಿ.ಯವರು ಮುಂದುವರೆಸುತ್ತಾರೆ. ವಿಧಿಯ ಕೈ ಬಲಿಷ್ಟವಾಗಿರುವುದರಿಂದ, ಅದರ ಕೈಗೆ ಸಿಕ್ಕ ನಮ್ಮ ಜೀವನ ಏರುಪೇರಾಗುತ್ತದೆ. ವಿಧಿ ನಿಯಮಗಳಿಗೆ ಅನುಸಾರವಾಗಿ ಎದುರಿಸಬೇಕಾದ ಕಷ್ಟ ಕಾರ್ಪಣ್ಯಗಳು ಎಷ್ಟೋ ತೀವ್ರತೆ, ತೀಕ್ಷ್ಣತೆ, ಉಗ್ರವಾಗಿದ್ದರೂ ಅದನ್ನು ಎದುರಿಸಬೇಕಾದ ಕೆಚ್ಚೆದೆ ನಮ್ಮಲ್ಲಿ ಇರಬೇಕು. ವಿಧಿಯ ತೀವ್ರತೆಯ ಸಂಕಷ್ಟಗಳನ್ನು ಗೋಳಾಡದೇ, ಗೊಣಗಾಡದೇ 'ನಮ್ಮ ಕರ್ಮದ ಪ್ರಕಾರ ನಾವು ಅನುಭವಿಸಲೇಬೇಕು ಎಂಬ ಕೆಚ್ಚೆದೆಯಿಂದ ಜೀವನದ ಹೋರಾಟವನ್ನು ನಡೆಸಬೇಕಾದ ಮನೋಬಲವನ್ನು ಹೊಂದಿರಬೇಕು. ಇದೂ ಒಂದು ತಪಸ್ಸು. ಮುಂದೆ ಡಿ.ವಿ.ಜಿ.ಯವರೂ ಮೂರನೇ ತಪದ ಬಗ್ಗೆ ಹೇಳಿದ್ದಾರೆ. ನಮ್ಮ ಜೀವನದಲ್ಲಿ ಹಾಸು–ಹೊಕ್ಕಾಗಿರುವ ಸೋಲು ಗೆಲುವುಗಳಲ್ಲಿ ಸಮತೆ ಹಾಗೂ ನಿರ್ಮತ್ಸರತೆ ಇರಲೇಬೇಕು ಎನ್ನುತ್ತಾರೆ. ಜಗದ್ಗುರು ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಇದೇ ಸಮತೆಯನ್ನು ಉಪದೇಶಿಸಿದ್ದಾರೆ. ಲಾಭ–ನಷ್ಟ, ಜಯ–ಅಪಜಯ, ಸುಖ–ದುಃಖ, ನಗು–ಅಳು, ಇವೆಲ್ಲಾ ದ್ವಂದ್ವಗಳನ್ನು ಹಿಗ್ಗು–ಕುಗ್ಗುಗಳಿಲ್ಲದೆ, ಸಮತೆಯಿಂದಲೇ ಸ್ವೀಕರಿಸಬೇಕು ಎಂದಿದ್ದಾನೆ. ಮನುಷ್ಯ ಮಾತ್ರದವರೆ ಈ ರೀತಿ ಸಮಾನವಾಗಿ ನೋಡುವುದು ಕಷ್ಟಕರವೇ.



ಮನಸ್ಸಿನ ಮೇಲೆ ನಿಯಂತ್ರಣವನ್ನು ತಂದುಕೊಳ್ಳಬೇಕು. ಸಾಧಿಸಬೇಕು. ಪರರ ಗೆಲುವುಗಳನ್ನು ನಿರ್ಮತ್ಸರತೆಯಿಂದ ಕಾಣಬೇಕು ಎಂದಿದ್ದಾರೆ ಡಿ.ವಿ.ಜಿ. ಸಾಮಾನ್ಯವಾಗಿ ಪರರ ಏಳಿಗೆಯನ್ನು ಕಂಡು ಕರುಬುವುದೇ ಜಾಸ್ತಿ. ಇದನ್ನೇ ಡಿ.ವಿ.ಜಿ. ಅವರು ಒಂದು ಮೌಕ್ತಿಕದಲ್ಲಿ ಈ ಹೊಟ್ಟೆಕಿಚ್ಚಿನ ಬಗ್ಗೆ ಹೇಳಿದ್ದಾರೆ.

ಹೊಟ್ಟೆ ಹೊರೆಯಲು ಪಡುವ ಕಷ್ಟ ಸಾಲದೆಂದೇನೋ. ವಿಧಿ ಹೊಟ್ಟೆ ಕಿಚ್ಚಿನ ಕಿಡಿಯನ್ನು ನರದೊಳ ನೆಟ್ಟಿದ್ದಾನೆ. ಹೊಟ್ಟೆ ತುಂಬಿದ ತೋಳವಾದರೂ ಮಲಗುತ್ತೆ. ಆದರೆ ನೀನು ಪೆರರ ಕಂಡು ಕರುಬುವೆ' ಎಂದು ಮನುಜನ ಅತೃಪ್ತಿಯನ್ನು, ಅದರಿಂದ ಉಂಟಾಗುವ ಹೊಟ್ಟೆ ಕಿಚ್ಚನ್ನು ವರ್ಣಿಸುತ್ತಾರೆ. ಉರಿಯುವ ಹೊಟ್ಟೆ ಕಿಚ್ಚು ಆರಿಸಲು ನೀರೆಲ್ಲಿ ತರುವುದು. ಅಂತಹ ಕಿಚ್ಚಿರುವಾಗ, ನಿದ್ದೆಗೆ ತಾನೇ ಎಡೆಯೆಲ್ಲಿ? ನಿದ್ದೆ ಹೇಗೆ ತಾನೇ ಬಂದೀತು. ಮನದಲ್ಲಿ ಹೊಟ್ಟೆ ಕಿಚ್ಚಿರುವ ಮನುಜನ ಸಂಕಟವನ್ನು ಯಾರು ತಾನೇ ಪರಿಹರಿಸಲು ಸಾಧ್ಯ? ಅದನ್ನು ಡಿ.ವಿ.ಜಿ. ಅವರು ಹೀಗೆ ಹೇಳುತ್ತಾರೆ. 'ಹೊಟ್ಟೆ ಕಿಚ್ಚು ಇರುವವರನ್ನು ದೇವರೇ ಪೊರೆಯಬೇಕು. ಕರುಬಿದನ ಹರಿ ಪೊರೆಗೆ' ಹೀಗೆ ನಮ್ಮ ಜೀವನದಲ್ಲಿ ಬರುವ ಸೋಲು–ಗೆಲುವುಗಳಿಗೆ ರಾಗ–ದ್ವೇಷ–ಅಸೂಯೆಗಳಿಗೆ ಪ್ರಭಾವಿತ ರಾಗದೆ. ಸಮಾನ ದೃಷ್ಟಿಯಿಂದ ಕಾಣುವ ಮನೋದಾರ್ಢ್ಯವನ್ನು ಬೆಳೆಸಿಕೊಳ್ಳಬೇಕು. ಇದೂ ಒಂದು ತಪಸ್ಸು.

ಈ ರೀತಿ ಮನಸ್ಸನ್ನು ಸ್ವಸ್ಥವಾಗಿ, ನಿರ್ಮಲವಾಗಿ ಇಟ್ಟುಕೊಳ್ಳುವುದೇ ಶಮ. ಕ್ಷಮೆ–ಕೆಚ್ಚೆದೆ, ಸೋಲು–ಗೆಲುವುಗಳಲ್ಲಿ ಸಮಾನತೆ ನಿರ್ಮತ್ಸರತೆ ಯನ್ನು ನಾವು ಪಾಲಿಸಿದ್ದೇ ಆದರೆ ನಮ್ಮ ಜೀವನಕ್ಕೆ ನಿರ್ದಿಷ್ಟತೆ ಇರುತ್ತದೆ. ಮಿಕ್ಕೆಲ್ಲಾ ಪದಗಳು ಬರಿಯ 'ಭ್ರಮೆ' ಎಂದಿದ್ದಾರೆ ಪೂಜ್ಯ ಡಿ.ವಿ.ಜಿ.

✍ ಶ್ರೀಮತಿ ಜಿ.ಪಿ. ಲಕ್ಷ್ಮೀದೇವಿ
080–23444798

# ನವಗ್ರಹ – ಒಂದು ಚಿಂತನೆ

**ಗೃಹ್ಣಂತಿ ಇತಿ ಗ್ರಹಾ: –** ಗ್ರಹ ಎಂದರೆ ಹಿಡಿಯುವುದೆಂದರ್ಥ. ನವ ಎಂದರೆ ಒಂಬತ್ತು ಮತ್ತು ಹೊಸದು. ಒಂಬತ್ತು ಸಂಖ್ಯೆಯ ನಂತರ ಎಲ್ಲಾ ಸಂಖ್ಯೆಗಳು ಪುನರಾವರ್ತನೆ ಮತ್ತು ಒಂಬತ್ತೇ ಅಲ್ಲದೆ ಮನುಷ್ಯನು ಇನ್ನೂ ಹಲವಾರು ಹಿಡಿತಕ್ಕೊಳಗಾಗುತ್ತಿರುತ್ತಾನೆ. ಕರ್ಮಪ್ರಧಾನವಾದ ಜಗತ್ತಿನಲ್ಲಿ ಮಾನವನು ಸಾಮಾನ್ಯವಾಗಿ ಯಾವುದರಿಂದಲೋ ಬಂಧನಕ್ಕೊಳಗಾಗಿರುತ್ತಾನೆ ಮತ್ತು ತಾನು ಮಾಡುವ ಪ್ರತೀ ಕರ್ಮಕ್ಕೂ ಇಂತಹುದೇ ಫಲ ಬರಬೇಕೆಂದು ಅಪೇಕ್ಷಿಸುತ್ತಿರುತ್ತಾನೆ. ಯಾವಾಗ ಇದು ತನ್ನ ಹಿಡಿತದಲ್ಲಿಲ್ಲ ಎಂದು ತಿಳಿಯುತ್ತದೋ ಆಗ ತನ್ನ ಇಚ್ಛೆ ಪೂರೈಸಿಕೊಳ್ಳುವುದಕ್ಕೆ ದೇವಾನುದೇವತೆಗಳ ಪೂಜೆ, ಹೋಮ ಮಾಡುವುದು, ಜಾತಕ ತೋರಿಸುಕೊಳ್ಳುವುದು ಮುಂತಾದವುಗಳನ್ನು ಆಶ್ರಯಿಸುತ್ತಾನೆ.

ಜ್ಯೋತಿಷ್ಯ ಶಾಸ್ತ್ರದಲ್ಲಿ "ಗ್ರಹಗಾವೋ ನರೇಂದ್ರಶ್ಚ ಬ್ರಾಹ್ಮಣಶ್ಚ ವಿಶೇಷತ:। ಪೂಜಿತಾ:ಪೂಜಯಿಷ್ಯಂತಿ ನಿರ್ದಹಂತ್ಯನಮಾನಿತಾ॥ ಗ್ರಹಗಳು, ಗೋವುಗಳು, ರಾಜ, ಮತ್ತು ಬ್ರಾಹ್ಮಣರು ಈ ನಾಲ್ವರು ಪೂಜಿತರಾದರೆ ಸದಾಭೀಷ್ಟ ಈಡೇರುತ್ತದೆ, ಅವಮಾನಿತರಾದರೆ ಸರ್ವನಾಶವಾಗುತ್ತದೆ ಎಂದು ಹೇಳಲಾಗಿದೆ.

ನವಗ್ರಹಗಳಲ್ಲಿ ಸೂರ್ಯ, ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಮತ್ತು ಶನಿ ಎಂಬ ಏಳು ಗ್ರಹಗಳನ್ನು ಭೌತಿಕವಾಗಿ ಕಾಣುತ್ತೇವೆ. ಮತ್ತೆರೆಡು, ರಾಹು ಮತ್ತು ಕೇತು ಛಾಯಾಗ್ರಹಗಳು ಎಂದು ಕರೆಸಿಕೊಳ್ಳುತ್ತವೆ. ಈಗ ಈ ಗ್ರಹಗಳ ಬಗ್ಗೆ ಸ್ವಲ್ಪ ಚಿಂತನೆ ಮಾಡೋಣ. ಹೊರಗೆ ಸೌರವ್ಯೂಹದಲ್ಲಿ ಕಣ್ಣಿಗೆ ಕಾಣುವ ಸೂರ್ಯ, ಚಂದ್ರರಲ್ಲದೆ ಮಂಗಳ, ಬುಧ, ಗುರು, ಶುಕ್ರ, ಮತ್ತು ಶನಿ ಗ್ರಹಗಳು ವೈಜ್ಞಾನಿಕವಾಗಿ ಸಾಬೀತಾಗಿ 'ಇದೇ' ಎಂದು ಖಚಿತವಾಗಿದೆ. ಇದನ್ನು ನಮ್ಮ ಈ ಪ್ರಾಕೃತಿಕ ಶರೀರದಲ್ಲೂ ಗುರುತಿಸಬಹುದು.

**ಸೂರ್ಯ: – ಆರೋಗ್ಯಂ ಪ್ರದದಾತುನೋ ದಿನಕರ:**

ಸೂರ್ಯನು ಜ್ಞಾನದ ಸಂಕೇತ. ಮಾನವನು ಯಾವುದೇ ಕರ್ಮಕ್ಕೆ ತೊಡಗುವ ಮೊದಲು ಅದರ ಬಗ್ಗೆ ಸರಿಯಾದ ಜ್ಞಾನ ಇರಬೇಕು. ಸೂರ್ಯನನ್ನು ನಾವು ಆರೋಗ್ಯಕ್ಕಾಗಿ ಸ್ತುತಿಸುವುದು ಮತ್ತು ವಂದಿಸುವುದು ರೂಢಿಯಲ್ಲಿದೆ. ಕಣ್ಣಿಗೆ ಕಾಣುವ ಈ ದಿನಕರನಲ್ಲಿ ಮೂರು ವಿಚಾರಗಳಿವೆ. ಸೂರ್ಯನಲ್ಲಿರುವ ವಿಶೇಷತೆ ಏನೆಂದರೆ ಯಾವುದೇ ಬೇಧಭಾವವಿಲ್ಲ, ಯಾವುದೇ ವಿರಾಮವಿಲ್ಲ, ಮತ್ತು ಯಾವುದೇ ಅಪೇಕ್ಷೆಯಿಲ್ಲ. ಶಾಖ ಮತ್ತು ಬೆಳಕು ಅವನ ಸ್ವಭಾವ. ಇದು ದೇಹದಲ್ಲಿ ಜೀವಂತವಾಗಿರುವಾಗ ಜ್ಞಾನವಾಗಿ ಬೆಳಗುತ್ತದೆ. ವೈಜ್ಞಾನಿಕವಾಗಿ ಸೂರ್ಯನಿಗೆ ಉದಯ ಮತ್ತು ಅಸ್ತಮಗಳಿಲ್ಲ. ನಮಗೆ ಕಾಣದಿರುವಾಗ ಭೂಮಿ ಸೂರ್ಯನಿಗೆ ವಿಮುಖವಾಗಿರುತ್ತದೆ. ಸೂರ್ಯನು ಭೌತಿಕ ಶರೀರದಲ್ಲಿ ಕಣ್ಣಿಗೆ ಅಭಿಮಾನಿ ದೇವತೆ. ಅಂದರೆ ನಾವು ಹೃದಯ ವೈಶಾಲ್ಯತೆಯ ದೃಷ್ಟಿಕೋನ ಬೆಳಸಿಕೊಂಡಲ್ಲಿ ಪ್ರಾರಬ್ಧ ಕರ್ಮವಿದ್ದರೂ ಭಗವಂತನ ಸೃಷ್ಟಿಯಲ್ಲಿ ಯಾವುದೇ ದೋಷವನ್ನು ಕಾಣುವುದಿಲ್ಲ.

**ಚಂದ್ರ:– ಚಂದ್ರೊ ಯಶೋ ನಿರ್ಮಲಂ:**

ಚಂದ್ರನು ಮನಸ್ಸಿನ ಸಂಕೇತ. ತಂಪು ಮತ್ತು ಬೆಳದಿಂಗಳು ಅವನ ಸ್ವಭಾವ. ಭೂಮಿಯಲ್ಲಿನ ವನಸ್ಪತಿ ಬೆಳವಣಿಗೆಗೆ ಚಂದ್ರನ ಅವಶ್ಯಕತೆ ಇದೆ. 'ಮನ ಏವ ಮನುಷ್ಯಾಣಾಂ ಕಾರಣಂ ಬಂಧ: ಮೋಕ್ಷ:" ಎಂಬಂತೆ ಮಾನವನು ಬಂಧನ, ಮೋಕ್ಷ ಎಂದು ತಿಳಿಯುವ ವಿಚಾರಗಳಿಗೆ ಮನಸ್ಸೇ ಕಾರಣ. ಮನಸ್ಸು ಪ್ರಫುಲ್ಲವಾಗಿದ್ದರೆ ನಾವು ತೆಗೆದುಕೊಳ್ಳುವ ಪ್ರತೀ ನಿರ್ಧಾರವೂ ವಿವೇಕದಿಂದ ಕೂಡಿರುತ್ತದೆ ಮತ್ತು ಯಶಸ್ಸು ಸಿಗುತ್ತದೆ. ಅದ್ದರಿಂದ ಚಂದ್ರನ ಆರಾಧನೆ ರೂಢಿಯಲ್ಲಿದೆ. ಮನಸ್ಸಿನಲ್ಲಿ ಪ್ರಶಾಂತತೆ ಇದ್ದಾಗ ವದನದಲ್ಲಿ ಪ್ರಸನ್ನತೆ ಕಾಣಬಹುದು.

**ಮಂಗಳ: ಭೂತಿಂ ಭೂಮಿ ಸುತ:**

ಮಂಗಳನನ್ನು ಸಂಪತ್ತು, ಶ್ರೇಯಸ್ಸಿಗಾಗಿ ಪೂಜಿಸುತ್ತಾರೆ. ಮಾನವನು ಹುಟ್ಟಿನಿಂದ ಸಾಯುವವರೆಗೂ ಭೂಮಿ ಮೇಲೆ ಇವುಗಳಿಗಾಗಿ ಪ್ರಯತ್ನಿಸುತ್ತಿರುತ್ತಾನೆ. ಪೃಥ್ವಿಯು ಮಂಗಳದ ಅಧಿದೇವತೆ. ಪೃಥ್ವಿಯಲ್ಲಿ ದೊರಕುವ ಆಹಾರವನ್ನು ತೆಗೆದುಕೊಂಡು ಬೆಳೆಯುವ ಈ ಮನುಷ್ಯ ಕಾಯವು ಅಲ್ಲಿಂದಲೇ ಉತ್ಪತ್ತಿಯಾಗಿರುವ ಕಲ್ಲು, ಮಣ್ಣು, ಮರ, ಮತ್ತು ಲೋಹಗಳನ್ನು ಕಚ್ಚಾವಸ್ತುವನ್ನಾಗಿ ಮಾಡಿಕೊಂಡು ತನಗೆ ಅವಶ್ಯಕವಿರುವ ಪ್ರತೀ ಉತ್ಪನ್ನಗಳನ್ನು ತಯಾರಿಸುಕೊಳ್ಳುತ್ತದೆ. ಈ ಕಚ್ಚಾವಸ್ತುಗಳನ್ನು ಮಿತವಾಗಿ ಬಳಸಬೇಕು. ಇವುಗಳ ನಾಶವು ಮಾನವಕುಲಕ್ಕೆ ಕಂಟಕವಾಗುತ್ತದೆ. ವ್ಯವಸ್ಥೆಯನ್ನು ಹಳಿಯುವ ಬದಲು ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆ, ಜವಾಬ್ದಾರಿ, ಕರ್ತವ್ಯವಾಗಬೇಕು.

**ಬುಧ: ಸುದಾಂಶು ತನಯ: ಪ್ರಜ್ಞಾ:**

ಬುಧಗ್ರಹವು ಪ್ರಜ್ಞೆಯ ಸಂಕೇತ. ವಿವೇಕಯುಕ್ತ ಜ್ಞಾನವು ಅನುಭವದ ಜೊತೆಯಾದಾಗ ಪ್ರಜ್ಞೆಯು ಘನವಾಗುತ್ತದೆ. ವಿಷ್ಣುವು ಬುಧನಿಗೆ ಅಧಿದೇವತೆ. ವಿಷ್ಣು ಎಂದರೆ ವ್ಯಾಪಕತ್ವ. ಎಲ್ಲಡೆ ಪರಬ್ರಹ್ಮನ ದರ್ಶನ ಮಾಡುವ ನಿತ್ಯ ಎಚ್ಚರ ಬುಧನ ಆರಾಧನೆಯಿಂದ ದೊರಕುತ್ತದೆ.

**ಗುರು: ಗುರ್ರು ಗೌರವಂ:**

ಗುರು ಎಂದರೆ ಲಘುವಲ್ಲದ್ದು. ಸೌರವ್ಯೂಹದಲ್ಲಿ ದೊಡ್ಡದಾದ ಗ್ರಹವು ಗುರುಗ್ರಹವೇ. ಮಾನವ ಜೀವನದಲ್ಲಿ ಬುದ್ಧಿಯು ಸೂಕ್ಷ್ಮವಾದರೆ ಅದೇ ಶಿಷ್ಯನಾದ ಮನಸ್ಸಿಗೆ ಗುರುವಾಗುತ್ತದೆ (ನಿಶ್ಚಯಾತ್ಮಕ ಬುದ್ಧಿ:, ನಿರುದ್ವಿಗ್ನ ಮನ:). ಇಂದ್ರನು ಗುರುವಿಗೆ ಅಧಿದೇವತೆ. ಆಗುವ ಕ್ರಿಯೆಗೆ ಅಹಂ (ಶರೀರಭಾವ) ಸೇರಿದಾಗ ಕರ್ಮ ಆಗುತ್ತದೆ. ಅಹಂ ತೊರೆದು ಕ್ರಿಯೆ ಆದಾಗ ಭಗವದರ್ಪಣೆ ಆಗುತ್ತದೆ. ಈ ರೀತಿಯಾದಾಗ ನಾವು ಮಾಡುವ ಎಲ್ಲಾ ಕೆಲಸಗಳಿಗೂ ಗೌರವ ದೊರಕುತ್ತದೆ. ಇದನ್ನು ತಿಳಿಯುವುದಕ್ಕೆ ಗುರುವಿನ ಅವಶ್ಯಕತೆ ಇದೆ. ಆದ್ದರಿಂದ ಗುರುವಿನ ಆರಾಧನೆ ಅತ್ಯಗತ್ಯ.

**ಶುಕ್ರ: ಕಾವ್ಯಾ: ಕೋಮಲ ವಾಗ್ವಿಲಾಸ ಮತುಲಂ:**

ಶುಕ್ರಗ್ರಹವು ಒಳ್ಳೆಯ ಮಾತು, ವಾಕ್‌ಶಕ್ತಿಗೆ ಸಂಬಂಧಿಸಿದ್ದು. ಇದರ ಅಧಿದೇವತೆ ಇಂದ್ರಾಣಿ. ಪ್ರಾಣಿಗಳಿಗಿಲ್ಲದ ಓಜಸ್ಸು, ತೇಜಸ್ಸು (ವಾಣಿ, ವಿವೇಕ) ವಿಶೇಷವಾಗಿ ಮಾನವನಿಗ ದೊರಕಿದೆ. ಇಂತಹ ದೊರಕಿದ ಸೌಲಭ್ಯವನ್ನು ನಾವು ಶಾಶ್ವತ ಆನಂದಕ್ಕೆ ಬಳಸಬೇಕು. ಸಂಬಂಧಗಳನ್ನು ಬೆಳಸಬೇಕಾದರೆ ಪ್ರಮುಖವಾಗಿ ಪ್ರಪಂಚದಲ್ಲಿ ಮಾನವನಿಗೆ ಸಂವಹನ/ಸಂಪರ್ಕ ಬಹು ಮುಖ್ಯ. ವಿಚಾರ ವಿನಿಮಯ, ವ್ಯವಹಾರ, ವ್ಯಾಪಾರ, ಭಾವ ಪ್ರಕಟಣೆಗಳಿಗೆ ಮಾತು ಅವಶ್ಯಕ. ಇದು ಹಿತ ಮಿತವಾಗಿದ್ದರೆ ಬೇಡವಾದ ವೈಮನಸ್ಯ, ಅಪಾರ್ಥಗಳಿಗೆ ಎಡೆ ಇರುವುದಿಲ್ಲ. ಸಂದರ್ಭೋಚಿತ ಮಾತು ಸನ್ನಿವೇಶವನ್ನು ತಿಳಿಯಾಗಿಸುತ್ತದೆ. ಇದಕ್ಕೆ ಶುಕ್ರಗ್ರಹ ಆರಾಧನೆ ಮುಖ್ಯವಾಗುತ್ತದೆ.

**ಶನಿ: ಮಂದೋ ಮುದಂ ಸರ್ವದಾ**

ಶನಿಗ್ರಹವು ಸೌರವ್ಯೂಹದಲ್ಲಿ ಒಂದು ಬಳೆಯನ್ನೊಳಗೊಂಡಂತಿದೆ. ಮಾನವ ತಾನು ಇರುವ ಸಮಾಜದಲ್ಲಿ ತಾನೇ ಒಂದು ಬಂಧನಕ್ಕೊಳ

ಮುಂದಿನ ಪುಟಕ್ಕೆ ಮುಂದುವರೆದಿದೆ

ಹಿಂದಿನ ಪುಟದಿಂದ

ಗಾಗಿರುತ್ತಾನೆ. ವಿದ್ಯೆ, ರೂಪ, ಅಧಿಕಾರ, ಸಿರಿತನ, ಆರೋಗ್ಯ ಇವೇ ಮೊದಲಾದ ವಿಷಯಗಳಿಂದ ತನ್ನನ್ನು ತಾನೇ ಹೆಚ್ಚೆಂದುಕೊಂಡಿರುತ್ತಾನೆ. ಇದೊಂದು ನಿಶೆ. ಈ ನಿಶೆಯು ಶನಿ ಎಂಬುದರ ತಿರುಗು ಮುರುಗು (ಶನಿ –>ನಿಶ). ಶನಿಯು ಈ ನಿಶೆಯಿಂದ ಹೊರಬರಲು ಸಹಾಯ ಮಾಡುತ್ತಾನೆ. "ಶಂ ನಯತೇತಿ ಶನಿ:" ಹಾಗೆಂದರೆ ಶನಿಯು ಮಂಗಳ ಕಾರಕ ಎಂದರ್ಥ. ಶನಿಗ್ರಹವೆಂದರೆ ಹೆದರಬೇಕಾಗಿಲ್ಲ. ಶನಿಗ್ರಹ ಸಂಚಾರ ಅವಧಿಯಲ್ಲಿ ಕಷ್ಟಗಳು ಬರುತ್ತದೆ ಎಂದು ರೂಢಿಯಲ್ಲಿದೆ. ಆದರೆ ಆ ಸಮಯದಲ್ಲಿ ಮಾನವನು ದೈವದ ಚಿಂತನೆ, ಪೂಜೆ, ಜಪ, ತೀರ್ಥಯಾತ್ರೆ ಹೆಚ್ಚಾಗಿ ಮಾಡಿ ದೈವಾನುಗ್ರಹಕ್ಕೆ ಪ್ರಾಪ್ತವಾಗುತ್ತಾನೆ. ದೈವದ ವಿಚಾರವನ್ನೇ ಹೆಚ್ಚಾಗಿ ಮಾಡುವುದರಿಂದ ಶನಿಯ ಸಂಕೇತವಾದ ಸುಪ್ರಸನ್ನ ಮನಸ್ಸು ಸ್ವಾಭಾವಿಕವಾಗಿ ಉಂಟಾಗುತ್ತದೆ. ಶನಿಯ ಸಂಚಾರವು ಕಹಿಯಾದ ಔಷಧಿಯಂತೆ. ಆದರೆ ಪರಿಣಾಮದಲ್ಲಿ ಅಮೃತೋಪಸಮನಾದ ಸುಖಕ್ಕಾಗಿ ಇರುವುದು.

**ರಾಹು: ರಾಹು: ಬಾಹುಬಲಂ ವಿರೋಧ ಶಮನ:**

ಸೌರವ್ಯೂಹದಲ್ಲಿ ಇರದ ರಾಹು ಗ್ರಹದ ವಿಚಾರ ಪುರಾಣಗಳಲ್ಲಿ ಸಮುದ್ರಮಥನವಾದಾಗ ಬರುತ್ತದೆ. ರಾಹು ಶಿರರಹಿತವಾಗಿದ್ದು ಬಾಹು ಬಲದ ಸಂಕೇತ. ನಮ್ಮ ಪ್ರಬಲವಾದ ಶತ್ರು ಎಂದರೆ 'ನಾನು' ಎಂಬ ಅಹಂಕಾರ (ಶರೀರಭಾವ). ಇದು ಹೆಚ್ಚಾದಾಗ ಭಗವಂತನನ್ನು ಮರೆತು ಎಲ್ಲಾ ನನ್ನಿಂದಲೇ ಆಗುತ್ತದೆ ಎಂಬ ಅಹಂಭಾವ ಉಂಟಾಗುತ್ತದೆ. ರಾಹುವಿನ ಆರಾಧನೆಯಿಂದ ಶರೀರವು ಮೋಕ್ಷಕ್ಕೆ ಸಾಧನ ಎಂದು ಅರಿವಾಗುತ್ತದೆ. ಮಾಡುವ ಕರ್ಮವೆಲ್ಲವನ್ನೂ ನಿಷ್ಕಾಮದಿಂದ ಮಾಡಿದಾಗ ಅದು ಭಗವತ್ ಚಿತ್ತ, ತಾನು ನೆಪ ಮಾತ್ರ ಎಂದು ತಿಳಿಯುತ್ತದೆ.

**ಕೇತು: ಕೇತು ಕುಲಸ್ಯೋನ್ನತಿಂ:**

ಸರ್ಪದ ಶಿರವುಳ್ಳದ್ದು ಕೇತುಗ್ರಹ. ಮಾನವ ಕುಲೋನ್ನತಿಗಾಗಿ ಕೇತು ಗ್ರಹವನ್ನು ಪೂಜಿಸಿ ಅರ್ಚಿಸುತ್ತಾರೆ. ಸೃಷ್ಟಿಗೆ ಮುಖ್ಯವಾದ ಚತುರ್ಮುಖ ಬ್ರಹ್ಮನು ಕೇತುವಿಗೆ ಅಧಿದೇವತೆ. ಸಂತನೋತ್ಪತ್ತಿಗಾಗಿಯೂ ಕೇತು ಆರಾಧನೆ ಮಾಡುತ್ತಾರೆ. ರಾಹು, ಕೇತುಗಳನ್ನು ಛಾಯಗ್ರಹಗಳು ಎನ್ನುತ್ತಾರೆ. ಏಕೆಂದರೆ ನಾನು, ನನ್ನದು ಎನ್ನುವುದು ಕಾಣದಂತೆ ಇದ್ದು ನಮ್ಮ ಅಧ್ಯಾತ್ಮ ಸಾಧನೆಗೆ ಅಡ್ಡಿಯಾಗುವ ಮುಖ್ಯವಾದ ದೋಷಗಳು. ಶರೀರವೇ (ಅಹಂತೆ) ನಾನಾದರೆ ಅದಕ್ಕೆ ಸಂಬಂಧಿಸಿದ್ದು ನನ್ನದು (ಮಮತೆ) ಎಂಬುದು ತಪ್ಪು ತಿಳುವಳಿಕೆ. ಈ ಅಜ್ಞಾನ ತೊಲಗಬೇಕು.

ದಾಸಶ್ರೇಷ್ಠರಾದ ಶ್ರೀ ಪುರಂದರದಾಸರು 'ಸಕಲಗ್ರಹಬಲ ನೀನೆ ಸರಸಿಜಾಕ್ಷ' ಎಂಬ ದೇವರನಾಮದಲ್ಲಿ ಪರಬ್ರಹ್ಮನೇ ಗ್ರಹಗಳು, ದಿನ ರಾತ್ರಿಯು, ಭವರೋಗ ವೈದ್ಯನು, ಕಾಲಾಧೀಶನು, ಸದ್ಗತಿಯು ಎಂದು ತಿಳಿಸಿ ಅವನನ್ನು ವರ್ಣಿಸಲು ವೇದವೂ ಸೋಲುತ್ತದೆ ಎಂದಿದ್ದಾರೆ. ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕನನ್ನು ಆರಾಧಿಸಿದರೆ ಅದು ಪ್ರಕೃತಿಯ ಚಿಚ್ಛಕ್ತಿಗಳಾದ ದೇವಾನುದೇವತೆಗಳನ್ನು ಪೂಜಿಸಿದಂತಾಗುತ್ತದೆ.

"ಸರ್ವ ದೇವ ನಮಸ್ಕಾರ: ಕೇಶವಂ ಪ್ರತಿಗಚ್ಛತಿ"



✍ ಆರ್. ರಮೇಶ್
9886034048

# ಡಿ.ವಿ.ಜಿ ಮತ್ತು ಮಹಿಳೆ



ಆವ ಋಣಕೋಸುಗವೊ
ಅವಾವ ಕಾರಣಕೊ, ಆವ ಯೋಜನೆಗೋ
ನೋವ ನೀಂ ಪಡುವುದೇ
ದೈವೇಚ್ಛೆಯಾಗಿರದೆ?
ದೈವಕುರುಡೆನ್ನದಿರು – ಮಂಕುತಿಮ್ಮ

ಜಗದಿ ಎಲ್ಲಾ ಕ್ಷೇತ್ರದಿ ಮಹಿಳೆಯರು ಮುಂದುವರಿದು ಸಾಧನೆ ಮಾಡಿ ಪ್ರಸಿದ್ಧ ರಾಗಿರುವರು. ಸಂಗೀತಾ, ನೃತ್ಯ, ವೈದ್ಯಕೀಯ, ವಕೀಲಿ, ಆಧ್ಯಾತ್ಮ, ರಾಜಕೀಯ, ಶಿಕ್ಷಣ ಕ್ಷೇತ್ರ, ವಿಜ್ಞಾನ, ವಿಮಾನ, ಪೊಲೀಸ್, ಯೋಗ, ವ್ಯಾಪಾರ, ಸಿನಿಮಾ ಹೀಗೆ ಎಷ್ಟು ವಿವಿಧ ಕ್ಷೇತ್ರಗಳೆಂಬೋ ಅಷ್ಟರಲ್ಲೂ ಮುಂದೆ ಬಂದಿದ್ದಾರೆ. ಹಾಗೆ ಸಮಾಜದ ಅನೇಕ ಟೀಕೆ, ನಿಂದೆಗಳನ್ನು ಎದುರಿಸಿ ಕಾರ್ಯ ಸಾಧಿಸಿ, ಜಯಗಳಿಸಿ ಅನೇಕ ಪದಕಗಳನ್ನು, ಪುರಸ್ಕಾರವನ್ನು ಪಡೆದಿದ್ದಾರೆ. ಇವರೆಲ್ಲಾ ಕೀರ್ತಿಗಳಿಸಿರುವುದು ಸಂತೋಷ.

ಆದರೆ ಗೃಹಸ್ಥಾಶ್ರಮ ಧರ್ಮದಿ ಬಡತನ, ಮಕ್ಕಳು, ದಬ್ಬಾಳಿಕೆ, ಬಂಧು, ಬಳಗ, ಮಿತ್ರರು ಇವರುಗಳನ್ನೆಲ್ಲಾ ನಿಭಾಯಿಸಿ ಎಲ್ಲವನ್ನೂ ಸಹನೆಯಿಂದ ಸಹಿಸಿ, ಮೌನದಿ ಇದ್ದು ಸಂಸಾರದಿ ಗೆದ್ದು ಮುಕ್ತರಾದವರು ಇದ್ದಾರೆ. ಆದರೆ ಅವರಿಗೆ ಯಾವ ಕೀರ್ತಿಯಾಗಲಿ, ಪಟ್ಟವಾಗಲಿ ಬೇಕೆಂಬ ಆಸೆ ಇರದೆ ಸಂಸಾರದಿ ಜಂಜಾಟದಿ ಬೆಂದು ನೊಂದವರು ನಮ್ಮ ನಿಮ್ಮ ನಡುವೆ ಮನೆಗಳಲ್ಲಿ ಇದ್ದರು. ಆ ಜೀವ ಯಾರ ಬಳಿಯೂ ಏನೂ ಹೇಳಿಲ್ಲ. ಎಲ್ಲಾ ವಿಧಿ ನಿಯಮವೆಂದು ಮನದಿ ಮೌನವಹಿಸಿದರು. ದೈವಭಕ್ತಿ, ಸ್ತೋತ್ರ, ಶ್ಲೋಕ ಇಷ್ಟೇ ಅವರ ಜಗತ್ತು. ಈ ಸಂಸಾರದ ಜಂಜಾಟದಿ ಇದ್ದು ಗೆದ್ದವರು ನಮ್ಮ ಅಜ್ಜಿ ಸಾವಿತ್ರಮ್ಮನವರು. ಶೃಂಗೇರಿಯಲ್ಲಿ ಗೃಹಸ್ಥಾಶ್ರಮದಿ ಮೂರು ಹೆಣ್ಣುಮಕ್ಕಳು. ಶ್ರೀಮಂತಿಕೆ ಯನ್ನು ಅನುಭವಿಸಿದವರು. ವಿಧಿ ಅಟ್ಟಹಾಸದಿ ಸಂಸಾರ ಘೋರ ಕಷ್ಟ, ನಷ್ಟ ಅನುಭವಿಸಿ ನೊಂದು, ಬೆಂದು ಪರಿಪಕ್ವತೆಯನ್ನು ಹೊಂದಿ ಇತರರಿಗೆ ಆದರ್ಶ ತೋರಿದರು. ಸಹನಾಮೂರ್ತಿ ನಮ್ಮಜ್ಜಿ. ಅವರ ತಮ್ಮ ಬೆಂಗಳೂರು ಶ್ರೀ ಕೃಷ್ಣ ಭಾಗವತರು ಆ ಕಾಲದಿ ಹರಿಕಥೆಯಲ್ಲಿ ಪ್ರಸಿದ್ಧಿ ಹೊಂದಿದವರು. ಅವರು ಪೂಜ್ಯ ಶ್ರೀ ಡಿ.ವಿ.ಜಿಯವರ ಮನೆಗೆ ಹೋಗುತ್ತಿದ್ದರು. ಶ್ರೀ ಡಿ.ವಿ.ಜಿ. ತಮ್ಮನಿಗೆ ನಮ್ಮ ಅಜ್ಜಿ ನಾದಿನಿ ಮಗಳ ಜೊತೆ ವಿವಾಹವಾಗಿತ್ತು. ಆ ನೆಂಟತನದಿ ಹೋಗಿ ಬರುವ ರೂಢಿಯಿತ್ತು. ಲೋಕಾಭಿರಾಮ ಮಾತುಕಥೆ, ಉಪಚಾರ ನಡೆಯುತ್ತಿತ್ತು. ಆದರೆ ಜ್ಞಾನಿ ಶ್ರೀ ಗುಂಡಪ್ಪನವರು ಹೇಗೆ ಜೀವಿಗಳ ಮಾತಿನಿಂದ ಅವರ ಅಂತರ್ಯವನ್ನು ಚೆನ್ನಾಗಿ ತಿಳಿಯುತ್ತಿದ್ದರು ಎನ್ನುವುದು ಆಶ್ಚರ್ಯ! ಭಾಗವತರು ಎಷ್ಟೇ ಹರಿಕಥೆ, ಧರ್ಮ ಪ್ರಚಾರ ಮಾಡಿದರೂ ಅವರ ಅಕ್ಕ ಶ್ರೀಮತಿ ಸಾವಿತ್ರಮ್ಮನವರ ಪರಿಪಕ್ವತೆ ಬಂದಿಲ್ಲ ಎಂದು ಅವರು ಒಮ್ಮೆ ಹೇಳಿದ್ದರು.

ಜ್ಞಾನಿಗಳು, ಸಂತರು ಜೀವಿಯ ಮೂಲಭೂತ ಲಕ್ಷಣಗಳನ್ನು ತಿಳಿದು "ಸಂಸ್ಕಾರವಂತರು" ಎಂದು ಅಂತಸತ್ವದಿ ತಿಳಿಯುತ್ತಿದ್ದರು. ಎಷ್ಟೇ ವೇಷ, ಆವೇಶ ಇದ್ದು ಮಾತಿನಲ್ಲಿ, ಪಾಂಡಿತ್ಯದಲ್ಲಿ ಪ್ರದರ್ಶಿಸಬಹುದು. ಆದರೆ ಜ್ಞಾನಿಗಳು ಸತ್ಯದರ್ಶಿಸಿ ಸತ್ಯ ಹೇಳುವರು. ಅದು ಅವರಿಗೆ ಮಾತ್ರ ಸಾಧ್ಯ. ಮಿಕ್ಕವರು ಅಜ್ಞಾನದಿ ಅರಿಯರು.



✍ ಭ್ರಮರ ಗೋಪಿನಾಥ್
26677574

# ಭಾಗ್ಯದ ಲಕ್ಷ್ಮೀ ಬಾರಮ್ಮ - ಜ್ಞಾನದೃಷ್ಟಿ

"ಭಾಗ್ಯದ ಲಕ್ಷ್ಮೀ ಬಾರಮ್ಮ" ದೇವರನಾಮವು ಸಂಗೀತ ಪಿತಾಮಹರು ಎಂದೆನಿಸಿರುವ ದಾಸವರೇಣ್ಯರಾದ ಶ್ರೀ ಪುರಂದರ ದಾಸರ ರಚನೆಯಾಗಿದೆ. ದಾಸರ ವಿಶೇಷವೇನೆಂದರೆ, ಪ್ರತಿಯೊಬ್ಬ ಜನಸಾಮಾನ್ಯನಿಗೂ, ಉಪನಿಷತ್ತು, ಬ್ರಹ್ಮಸೂತ್ರ, ಮತ್ತು ಭಗವದ್ಗೀತಾ ಎಂಬ ಪ್ರಸ್ಥಾನತ್ರಯದ ಸಾರವನ್ನು ತಿಳಿಗನ್ನಡದಲ್ಲಿ ಸುಲಭವಾಗಿ ತಿಳಿಯುವಂತೆ ಮಾಡಿದ್ದಾರೆ. ಭಕ್ತಿಗೆ ಇದು ಸುಲಭ ಮಾರ್ಗ. ಈ ಲೇಖನದ ಮೂಲಕ ಈ ದೇವರನಾಮದ ಯಥಾರ್ಥವನ್ನು ನನ್ನ ಬಾಲಭಾಷೆಯಲ್ಲಿ ತಿಳಿಸಲು ಇಚ್ಛಿಸುತ್ತೇನೆ.

**ಭಾಗ್ಯದ ಲಕ್ಷ್ಮೀ ಬಾರಮ್ಮ । ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ ॥ಪ॥**

ಭಾಗ್ಯ ಎಂದರೆ ಪ್ರಾಪ್ತಿ. ನಮ್ಮ ಸಂಚಿತ ಕರ್ಮದ ಫಲವಾದ ಪುಣ್ಯ–ಪಾಪಗಳನ್ನು ಈಗ ಪ್ರಾರಬ್ಧಕರ್ಮವಾಗಿ ಅನುಭವಿಸಲೇಬೇಕಾಗುತ್ತದೆ. ಇದು ಅನಿವಾರ್ಯ. ಇದು ಅನುಭವಿಸದೆ ಕ್ಷಯಿಸದು. ಈ ಅರಿವು ಮೂಡಬೇಕಾದರೆ, ಜ್ಞಾನಶಕ್ತಿಯ ಮಾತೆಯಾದ ಲಕ್ಷ್ಮೀದೇವಿಯ ಅನುಗ್ರಹವಾಗಬೇಕು. 'ನಮ್ಮಮ್ಮ' ಎಂದು ಹೇಳಿರುವುದು ಪ್ರಕೃತಿಗೆ ಕಾರಣವಾದ ಜಗನ್ಮಾತೆಯನ್ನು ಸೂಚಿಸಿದೆ. ಇಲ್ಲಿ ಆದಿಗುರು ಶ್ರೀ ಶಂಕರಭಗವತ್ಪಾದರ ಮಾತುಗಳು 'ಅವ್ಯಕ್ತ ನಾಮ್ನಿ ಪರಮೇಶ ಶಕ್ತಿ:' ಪ್ರಸ್ತುತ. ಸೌಭಾಗ್ಯ ಎಂದರೆ ನಮ್ಮ ಅಧ್ಯಾತ್ಮ ಸಾಧನೆ ಮೂಲಕ ದೈವಕೃಪೆಯೊಂದಿಗೆ ಆಗುವ ಜ್ಞಾನದ ಅರಿವು.

**ಹೆಜ್ಜೆಯ ಮೇಲೊಂದು ಹೆಜ್ಜೆಯನಿಕ್ಕುತ ಗೆಜ್ಜೆಯ ಕಾಲ್ಗಳ ಧ್ವನಿಯ ತೋರುತ**
**ಸಜ್ಜನ ಸಾಧು ಪೂಜೆಯ ವೇಳೆಗೆ ಮಜ್ಜಿಗೆಯೊಳಗಿನ ಬೆಣ್ಣೆಯಂತೆ ॥1॥**

ನಾವು ಮಾಡುವ ಪ್ರತಿ ಸಾಧನಾ ಮಾರ್ಗದಲ್ಲಿ ನಿಧಾನವಾಗಿ ಸಾಗಬೇಕು. (ಪೂಜ್ಯ ಡಿ.ವಿ.ಜಿ.ಯವರು ಅಧ್ಯಾತ್ಮದಲ್ಲಿ ಆತುರತೆ ಒಳಿತಲ್ಲ ಎಂದಿದ್ದಾರೆ). ಆದರೆ ಇದರ ಹಿಂದೆ ಶಕ್ತಿಯಾದ ಲಕ್ಷ್ಮೀದೇವಿಯ ಅನುಗ್ರಹ ಅನುಗಾಲವೂ ನಮ್ಮೊಂದಿಗೆ ಇರುತ್ತದೆ ಎಂದು ಸದಾ ವಿಶ್ವಾಸದಿಂದ ಮುನ್ನಡಯಬೇಕು. ಸದಾ ಸತ್ಸಂಗದಲ್ಲಿ ಭಗವತ್ ಚಿಂತನೆಯಿಂದ ಎಲ್ಲಾ ಕರ್ಮಗಳನ್ನು ಕ್ರಿಯೆಯೆಂದು ತಿಳಿದು ಮಾಡುವ ಸಾಧು ಸಜ್ಜನರಂತೆ ಮತ್ತು ಮಜ್ಜಿಗೆಯಲ್ಲಿ ಬೆಣ್ಣೆಯು ಹೇಗೆ ಅಂಟದಂತೆ ತೇಲುತ್ತದೋ ಹಾಗೆಯೇ ಸಂಸಾರದಲ್ಲಿದ್ದರೂ ನಾವು ಅದಕ್ಕೆ ಅಂಟದಂತೆ ಇರಬೇಕಾದರೆ ಲಕ್ಷ್ಮೀದೇವಿಯ ಕೃಪೆ ಅವಶ್ಯಕ.

**ಕನಕ ವೃಷ್ಟಿಯ ಕರೆಯುತ ಬಾರೆ ಮನಕೆ ಮಾನಸ ಸಿದ್ಧಿಯ ತೋರೆ**
**ದಿನಕರ ಕೋಟಿ ತೇಜದಿ ಹೊಳೆಯುವ ಜನಕರಾಯನ ಕುಮಾರಿ ನೀನು ॥2॥**

'ಕನಕ' ಎಂದರೆ ಇಲ್ಲಿ ಚಿನ್ನ ಎಂದು ಅರ್ಥೈಸಬಾರದು. ಅದು ಪೂರ್ಣತೆಯ ಸಂಕೇತ. ನಮಗೆ ದೊರೆತಿರುವ ಮಾನವ ಜನ್ಮವೂ ಪೂರ್ಣತೆಯ ಸಂಕೇತ. ಶ್ರೀ ಶಂಕರರು ವಿವೇಕ ಚೂಡಾಮಣಿ ಗ್ರಂಥದಲ್ಲಿ 'ದುರ್ಲಭಂ ಮಾನುಷ ದೇಹಂ' ಎಂದು ಹೇಳಿದ್ದಾರೆ. ಪ್ರಪಂಚದಲ್ಲಿ ಭಗವತ್ ಸೃಷ್ಟಿಯಲ್ಲಿ ಎಲ್ಲವೂ ಪೂರ್ಣವೇ. ಈ ಪೂರ್ಣತೆಯು ನಮ್ಮ ಅರಿವಿಗೆ ಬರಬೇಕಾದರೆ, ನಮಗೆ ಬೇಕಾದ ಅರ್ಹತೆಯನ್ನು ದಯಪಾಲಿಸುವವಳು ಲಕ್ಷ್ಮೀದೇವಿಯು.



ಯಾವುದೇ ಕರ್ಮದಿಂದ ಆಗಬೇಕಾದ್ದು ಚಿತ್ತಶುದ್ಧಿಯೇ. 'ಚಿತ್ತಸ್ಯ ಶುದ್ಧಯೇ ಕರ್ಮಸು' ಎಂಬ ಆದಿಶಂಕರರ ನುಡಿಗಳು ಇಲ್ಲಿ ಪ್ರಸ್ತುತ. ಚಿತ್ತಶುದ್ಧಿ ನಂತರ ನಮಗೆ ತಿಳಿಯದಂತೆ ಜ್ಞಾನವು ಸೂರ್ಯನ ಪ್ರಕಾಶದಂತೆ 'ಆತ್ಮವೇ ನಾನು' ಎಂಬ ತಿಳಿವಳಿಕೆ ಬರುತ್ತದೆ. ರಾಜರ್ಷಿಯಾದ ಜನಕ ಮಹಾರಾಜನ ಮಗಳಾದ ಸೀತಾಮಾತೆಯ ಸ್ವರೂಪಿ ಲಕ್ಷ್ಮೀದೇವಿಯನ್ನು ದಾಸರು ಕರೆಯುತ್ತಿದ್ದಾರೆ.

**ಕಂಕಣ ಕೈಯ್ಯ ತಿರುವುತ ಬಾರೆ ಸಂಖ್ಯೆ ಇಲ್ಲದ ಭಾಗ್ಯವ ತೋರೆ**
**ಕುಂಕುಮಾಂಕಿತೆ ಪಂಕಜಲೋಚನೆ ವೆಂಕಟರಮಣನ ಬಿಂಕದ ರಾಣಿ ॥3॥**

ಆತ್ಮಸಾಕ್ಷತ್ಕಾರದ ಮಾರ್ಗದಲ್ಲಿರುವ ಸಾಧಕನಿಗೆ ಜ್ಞಾನಾರ್ಜನೆಯು ಸತ್ಸಂಕಲ್ಪವಾಗಿದ್ದು (ಕಂಕಣ) ನಿರ್ವಿಘ್ನವಾಗಿ ನೆರವೇರಲು ಆದಿಶಕ್ತಿ ಸ್ವರೂಪಿಣಿಯಾದ ಲಕ್ಷ್ಮೀದೇವಿಯನ್ನು ಪ್ರಾರ್ಥಿಸುತ್ತಾರೆ. ಅಗಣಿತ ಮಹಿಮನಾದ ಭಗವಂತನ ಸಾಕ್ಷಾತ್ಕಾರವನ್ನು ಬಯಸುತ್ತಿದ್ದಾರೆ. ಮಂಗಳ ದ್ರವ್ಯವಾದ ಕುಂಕುಮ ಧರಿಸುವ ಸ್ಥಳವಾದ ಹಣೆಯಲ್ಲಿ ಆಜ್ಞಾಚಕ್ರವು ಇರುತ್ತದೆ. ಆಜ್ಞಾಚಕ್ರದ ಮೂಲಕ ಮನಸ್ಸನ್ನು ನಿಯಂತ್ರಿಸಬೇಕು. ಮನಸ್ಸು ಎಂದರೆ ಆಲೋಚನೆಗಳ ಗುಂಪು. ಮನಸ್ಸಿಗೆ ಗೋಚರವಾಗುವ ಇಂದ್ರಿಯ, ವಿಷಯ, ಪ್ರಪಂಚ ಇವುಗಳು ವ್ಯಾವಹಾರಿಕ ದೃಷ್ಟಿ ಎಂದು ನಿಶ್ಚಿತವಾಗಿ ತಿಳಿದು, ಹೇಗೆ ಕಮಲವು ಕೆಸರಿಗೆ ಅಂಟುವುದಿಲ್ಲವೋ ಹಾಗೆ ನಾವು ವಿಷಯಾಸಕ್ತರಾಗದೇ ಅಂಟೂ ಅಂಟದಂತೆ ಇರಬೇಕು. ಇದಕ್ಕೆ 'ವೆಂಕಟರಮಣನ' ಅಂದರೆ ಯಾವುದೇ ಬದಲಾವಣೆ ಇಲ್ಲದೇ ಸದಾ ಆನಂದ ಸ್ವರೂಪಿಯಾದ ಭಗವಂತನ ಶಕ್ತಿಯಾದ ತಾಯಿಯು ನಮ್ಮನ್ನು ಮೋಹಮಾಯೆಯಿಂದ ಬಿಡಿಸಿ (ಬಿಂಕದ ರಾಣಿ) ಯೋಗ ಮಾಯೆಯಲ್ಲಿ ತಲ್ಲೀನರಾಗುವಂತೆ ಮಾಡುತ್ತಾಳೆ.

**ಅತ್ತಿತ್ತಗಲದೆ ಭಕ್ತರ ಮನೆಯೊಳು ನಿತ್ಯ ಮಹೋತ್ಸವ ನಿತ್ಯ ಸುಮಂಗಲ**
**ಸತ್ಯವ ತೋರುತ ಸಾಧು ಸಜ್ಜನರ ಚಿತ್ತದಿ ಹೊಳೆಯುವ ಪುತ್ಥಳಿ ಬೊಂಬೆ ॥4॥**

ಪ್ರತಿ ಮನುಷ್ಯನ ಆನಂದದ ಸ್ಥಿತಿಯು ಸ್ವಸ್ವರೂಪವೇ ಆಗಿರುತ್ತದೆ. ಈ ಸ್ಥಿತಿಯ ಅನುಭೂತಿಗೆ ಗುಣದಿಂದ ಶ್ರೀದೇವಿಯ ದಯೆ ಬೇಕೇ ಬೇಕು. ಅದ್ದರಿಂದ ಭಗವಂತನ ದೃಷ್ಟಿಯಲ್ಲಿ ಯಾವುದೇ ದೋಷ ಇರುವುದಿಲ್ಲ. ಅವೆಲ್ಲವೂ ಸದಾ ಮಂಗಳಕರವೇ, ಸದಾ ಶುಭವೇ ಮತ್ತು ಎಲ್ಲವೂ ಆರಾಧಿಸತಕ್ಕಂತದ್ದೇ ಆಗಿರುತ್ತದೆ. ಜೀವನದ ಯಾವುದೇ ಹಂತದಲ್ಲೂ ಸತ್ಯದರ್ಶನವನ್ನು ಮಾಡುತ್ತಾ, ಅದೇ ಸ್ಥಿತಿಯಲ್ಲಿ ಇರುವುದಕ್ಕೆ ಸಗುಣೋಪಾಸನೆಯಲ್ಲಿ ಶ್ರವಣ, ಮನನ, ಮತ್ತು ನಿಧಿಧ್ಯಾಸನಗಳ ಮೂಲಕ ಶಾಂತಿ, ಸಮಾಧಾನದ ನೆಲೆ ಕಂಡುಕೊಳ್ಳುವುದಕ್ಕೆ ತಾಯಿಯ ಕರುಣೆ ಅತ್ಯಗತ್ಯ. ಇದರಿಂದ ಮಾನವ ಜನ್ಮದ ಸಾರ್ಥಕತೆಯಾಗುವುದು ಆತ್ಮಸಾಕ್ಷತ್ಕಾರದಿಂದಲೇ ಎಂದು ಚಿತ್ತದಲ್ಲಿ ದೃಢವಾಗುತ್ತದೆ.

**ಸಕ್ಕರೆ ತುಪ್ಪ ಕಾಲುವೆ ಹರಿಸಿ ಶುಕ್ರವಾರದ ಪೂಜೆಯ ವೇಳೆಗೆ**

ಮುಂದಿನ ಪುಟಕ್ಕೆ ಮುಂದುವರೆದಿದೆ

# ಸಂಖ್ಯಾಶಾಸ್ತ್ರ - ಆಧ್ಯಾತ್ಮ ಅವಿನಾ ಸಂಬಂಧ

ಬ್ರಹ್ಮಾಂಡ ಸೃಷ್ಟಿ ಕಾರ್ಯದಿ ಎಲ್ಲಾ ನಿಯಮಬದ್ಧವಾಗಿದೆ. ಹಾಗೆ ಪಿಂಡಾಂಡದಲ್ಲಿ ಲೆಕ್ಕಾಚಾರದಿ ಕ್ರಮಬದ್ಧವಾಗಿ ಹೃದಯದ ಬಡಿತ, ನಾಡಿ ಮಿಡಿತ, ರಕ್ತಸಂಚಾರ, ಶರೀರ ಬೆಳವಣಿಗೆ, ಬುದ್ಧಿ ಬೆಳವಣಿಗೆ ವಯೋ ಮಾನಕ್ಕೆ ತಕ್ಕಂತೆ ಪ್ರಕೃತಿ ಅಗೋಚರವಾಗಿ ನಡೆಸುತ್ತಿದೆ. ಈ ಕೌತುಕ ಅನುಭವಿಸಿ ಅರಿಯಬೇಕು. ನಿಸರ್ಗದಲ್ಲಿ, ಜೀವನದ ವ್ಯವಹಾರದಲ್ಲಿ ಲೆಕ್ಕಾಚಾರ ಹೇಗೆ ಮುಖ್ಯವೋ ಹಾಗೆ ಆಧ್ಯಾತ್ಮದಲ್ಲೂ ಲೆಕ್ಕಾಚಾರ ಇದೆ.

ಓಂ – ಅ, ಉ, ಮ ಮೂರು ಅಕ್ಷರದಲ್ಲಿ ಇಡೀ ಬ್ರಹ್ಮಾಂಡದ ಶಬ್ಧಶಕ್ತಿ ಅಡಗಿದೆ. 'ಓಂ ಇತ್ಯೇಕಾಕ್ಷರಂ ಬ್ರಹ್ಮ' – ಇದು ಮೂಲ (ಸಂಧ್ಯಾವಂದನೆಯ ಮಂತ್ರ).

ಓಂಕಾರದಿ ಸಪ್ತವ್ಯಾಹೃತಿಗಳಿಂದ ಸಪ್ತಮಾತೃಕಾಶಕ್ತಿ, ಅದರಿಂದ ಸಪ್ತ ಸ್ವರಗಳು, ಸಾಮವೇದ, ಸಂಗೀತ, ಸಾಹಿತ್ಯ, ಮಂತ್ರಮಾತೃಕೆಗಳು ಮತ್ತು ಇತರೆ.

ಏಕಾಕ್ಷರಂ ಬ್ರಹ್ಮದಿಂದ ತ್ರೈ ಅಕ್ಷರಿ, ಪಂಚಾಕ್ಷರಿ (ನಮ: ಶಿವಾಯ), ಷಡಕ್ಷರಿ (ಓಂ ನಮ: ಶಿವಾಯ), ಅಷ್ಟಾಕ್ಷರಿ (ಓಂ ನಮೋ ನಾರಾಯಣಾಯ), ತ್ರಯೋದಶಾಕ್ಷರಿ (ಶ್ರೀರಾಮಜಯರಾಮ ಜಯ ಜಯ ರಾಮ), ದ್ವಾದಶಾಕ್ಷರಿ (ಓಂ ನಮೋ ಭಗವತೇ ವಾಸುದೇವಾಯ) ಮಂತ್ರಗಳು ಲಭ್ಯವಾಗಿದೆ. ಅತ್ಯಂತ ಶ್ರೇಷ್ಟ ಮಂತ್ರವೇ ಗಾಯತ್ರಿ ಮಂತ್ರ (ಓಂ ಭೂರ್ಭುವಸ್ಸುವ: ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನ: ಪ್ರಚೋದಯಾತ್). ಇದರಲ್ಲೆಲ್ಲಾ ಶಕ್ತಿ ಬೀಜ ಮಂತ್ರದ ಸಾರವೇ ಇದೆ. ಈ ಗಾಯತ್ರಿ ಮಂತ್ರದಿಂದ ವೀಣಾವಾದ್ಯದಿ 24 ಮೆಟ್ಟಲುಗಳು. ಇದು ವಾಗ್ದೇವಿ ಮತ್ತು ನಾರದರ ಕರದಲ್ಲಿ ವಿಜೃಂಬಿಸಿದೆ. ಹಾಗೆ ಲಯವಾದ್ಯ ಮೃದಂಗ. ಕೊಳಲು ಎಲ್ಲಾ ಲೆಕ್ಕಾಚಾರದಿ ರಚನೆ. ನಾವಾಡುವ ಉಸಿರು ಲೆಕ್ಕಾಚಾರ (ಪ್ರಾಣಾಯಾಮ). ಒಂದು ದಿನಕ್ಕೆ 29,600 ಬಾರಿ ಉಸಿರಿನ ಲೆಕ್ಕ – ಉಚ್ಛ್ವಾಸ, ನಿಶ್ವಾಸ. ಇನ್ನು ರಾಮಾಯಣ, ಮಹಾಭಾರತ, ಭಾಗವತ ಎಲ್ಲಕ್ಕೂ ಸಂಖ್ಯಾಶಾಸ್ತ್ರದ ಕೊಂಡಿ ಜೋಡಣೆ ಇದೆ.

ನಾವು ಈ ಭೂಮಿಗೆ ಬರಲು ಜೀವ ಉತ್ಪತ್ತಿಗೆ ಒಂಬತ್ತು ತಿಂಗಳು ಲೆಕ್ಕ. ಒಂಬತ್ತು ದ್ವಾರಗಳು, ಪಂಚಕರ್ಮೇಂದ್ರಿಯಗಳು, ಪಂಚ ಜ್ಞಾನೇಂದ್ರಿಯಗಳು, ಪಂಚತನ್ಮಾತ್ರಗಳು. ಎತ್ತರ, ಗಾತ್ರ ಎಲ್ಲಾ ವಯೋಮಾನಕ್ಕೆ ಸರಿಯಾಗಿ ನಡೆಸುತ್ತಿದೆ. ನವರಾತ್ರಿಯಲ್ಲಿ ಶಕ್ತಿಯ ಆರಾಧನೆ . ಒಂಬತ್ತು ಪ್ರಾಕಾರಗಳ ನಂತರ ಶ್ರೀ ಲಲಿತಾದೇವಿ ದರ್ಶನ. ಬ್ರಹ್ಮ ಸಂಖ್ಯೆ ನವ. ಒಂಬತ್ತರ ಮಗ್ಗಿಯನ್ನು ಹೇಗೆ ಹೇಳಿದರೂ ಸಂಖ್ಯೆ "9" ಬರುವುದು ಇದು ಚಮತ್ಕಾರ. ನವಮಾಸ, ನವಗ್ರಹ, ನವರಂಧ್ರ, ನವಧಾನ್ಯ, ನವರಸ, ನವರತ್ನಗಳು, ನವವಿಧಭಕ್ತಿ. ಹೀಗೆ ಪ್ರತಿ ಸಂಖ್ಯೆಯಲ್ಲೂ 1 ರಿಂದ 9ರ ತನಕ. ಇಹ–ಪರಕ್ಕೆ ಬೇಕಾದ ಸಾಧನೆ ಬೀಜಾಕ್ಷರಿ ಮಂತ್ರ. ಎಲ್ಲಾ ಸಂಖ್ಯಾಶಾಸ್ತ್ರದಿಂದ ಕೂಡಿದೆ. ಲೆಕ್ಕಾಚಾರವಿಲ್ಲದೆ ಇಹವೂ ಇಲ್ಲ, ಪರವೂ ಇಲ್ಲ. ಇಲ್ಲಿ ರಾಮಾಯಣ 7ನೇ ಸಂಖ್ಯೆಗೂ, ಮಹಾಭಾರತ 18ನೇ ಸಂಖ್ಯೆಗೂ ಉದಾಹರಿಸಿದೆ.

**ಕನಕದಾಸರ ರಚನೆ**

ಎಂಟು ಗೇಣಿನ ದೇಹ ರೋಮಗ  
ಳೆಂಟು ಕೋಟಿಯು, ಕೀಲ್ಗಗರುವ  
ತ್ತೆಂಟು ಮಾಂಸಗಳಿಂದ ಮಾಡಿದ ಮನೆಯ ಮನವೊಲಿದು  
ನೆಂಟ ನೀನರ್ದ ಗಲಿದೆಡೆ ಒಣ  
ಹೆಂಟೆಯಲಿ ಮುಚ್ಚುವರು ದೇಹದ  
ಉಂಟೆ ಫಲ ಪುರುಷಾರ್ಥ ರಕ್ಷಿಸು ನಮ್ಮನನವರತ

ಸಂಖ್ಯಾಶಾಸ್ತ್ರಕ್ಕೂ ಆಧ್ಯಾತ್ಮಶಾಸ್ತ್ರಕ್ಕೂ ಅವಿನಾ ಸಂಬಂಧವಿದೆ.

**ರಾಮಯಣದ ಸಂಖ್ಯೆ ಏಳು.**

7 ಕಾಂಡಗಳು, 7ನೇದು ಶ್ರೀರಾಮಾವತಾರ, 7ನೇ ನಕ್ಷತ್ರ ಪುನರ್ವಸು – ಶ್ರೀರಾಮ ಪ್ರಕಟ.

ರಾಮ – ಕಟಪಯಾದಿ ಸೂತ್ರದ ಪ್ರಕಾರ – "ಮ" ಪಾದಿಪಂಚಮದಿ "ಮ" 5ನೇ ಅಕ್ಷರ, ರಾ ಯಾದ್ಯಷ್ಟದಿ 2ನೇ ಅಕ್ಷರ, ಅಂಕಾನಾಂಧಾ ಮಗತಿ:ಯಲ್ಲಿ ಮರಾ ಎಂಬುದು ರಾಮ ಎಂದಾಯ್ತು (5+2=7).

ಸಪ್ತಸ್ವರಗಳು, ಸಪ್ತಲೋಕಗಳು, ಸಪ್ತಸಾಗರಗಳು, ಸಪ್ತದ್ವೀಪಗಳು, ಸಪ್ತಋಷಿಗಳು, ಪಾಂಡವರು, ದ್ರೌಪದಿ, ಕೃಷ್ಣ ಸೇರಿ 7, ಮಹಾವಿಷ್ಣುವಿನ ಸಂಖ್ಯೆ 7, ಗೀತಶ್ಲೋಕ – 700, ದುರ್ಗಾಸಪ್ತಶತಿ – 700. ಹೀಗೆ ಸಪ್ತಕದಲ್ಲಿ ಅನೇಕ ಆಧ್ಯಾತ್ಮ ರಹಸ್ಯ ಅಡಗಿದೆ.

**ಮಹಾಭಾರತ ಸಂಖ್ಯೆ – 18**

ಪರ್ವಗಳು – 18, ಗೀತಾ ಅಧ್ಯಾಯಗಳು – 18, ಯುದ್ಧ – 18 ದಿನ, ಅಕ್ಷೋಹಿಣಿ – 18, ಪುರಾಣಗಳು – 18, ಶ್ಲೋಕಗಳು – 18 ಸಾವಿರ, ಮೌಲ್ಯಗಳು – 18, ಹಂಸ ಗಾಯತ್ರಿ ಮಂತ್ರ – 18.

**ಭ್ರಮರಾ ಗೋಪಿನಾಥ್**

---

**ಹಿಂದಿನ ಪುಟದಿಂದ**

**ಅಕ್ಕರೆಯುಳ್ಳ ಅಳಗಿರಿರಂಗನ ಚೊಕ್ಕ ಪುರಂದರ ವಿಠಲನ ರಾಣಿ ॥5॥**

ಹೇಗೆ ಸಕ್ಕರೆಯ ಸಿಹಿಯು, ಘನವಾದ ತುಪ್ಪವೂ (ದೋಷರಹಿತ ಮತ್ತು ಹಾಲಿನ ಶುದ್ಧ ರೂಪ) ಇದೆಯೋ ಹಾಗೆ ಜ್ಞಾನವನ್ನು ದೇವಿಯು ಶಕ್ತಿಯ ಮೂಲಕ ಪ್ರವಹಿಸುತ್ತಾಳೆ. ಶುಕ್ರ ಎಂದರೆ ಬಿಳಿ, ಪ್ರಕಾಶ, ಜ್ಞಾನ ಎಂದು ಅರ್ಥೈಸಬೇಕು. ಪೂರ್ಣದಿಂದ ಜನ್ಯವಾದದ್ದು ಪೂಜೆ. ಎಂದರೆ ಪ್ರತಿ ಕಾರ್ಯದಲ್ಲೂ ನಾವು ನಿಮಿತ್ತ ಮಾತ್ರ ಎಂದು ತಿಳಿದು ಎಲ್ಲವೂ ಭಗವತ್ ಸಂಕಲ್ಪದಂತೆ ನಡೆಯುತ್ತದೆ. ಭಕ್ತರ ಮೇಲಿನ ಪ್ರೇಮದಿಂದ (ಪ್ರೇಮ ಸ್ವರೂಪಿ ಅಳಗಿರಿರಂಗ) ಪರಬ್ರಹ್ಮ ವಸ್ತುವೇ ಪ್ರಕೃತಿ ಮಾತೆಯಾಗಿ, ನಮ್ಮೆಲ್ಲರ ಭವರೋಗವನ್ನು ಕಳೆದು ಸಾಧನಮಾರ್ಗಕ್ಕೆ ದಾರಿ ತೋರಿಸುತ್ತಾಳೆ. ಆಗ ಮಾರ್ಗವೂ, ಗುರಿಯು ಒಂದೇ ಆಗಿರುತ್ತದೆ ಎಂಬ ಅರಿವು ಮೂಡುತ್ತದೆ. ಶ್ರೀ ಪುರಂದರದಾಸರ ಕಾವ್ಯನಾಮವು ಮಾರ್ಮಿಕ ಅರ್ಥದೊಂದಿಗಿದೆ. ಪುರಂದರ ಎಂದರೆ ಶರೀರ. ಶರೀರ ಇರುವುದು ಒಳಗಿನ ಶುದ್ಧ ಚೈತನ್ಯದ ಕಾರಣದಿಂದ. ಇದರಲ್ಲಿ ಪ್ರಕೃತಿ ಮಾತೆ ಎಲ್ಲಾ ಕಡೆ ಪ್ರಾಣಶಕ್ತಿಯಾಗಿ ಹರಿಯುತ್ತಾ ಸರ್ವಕಾರಣ ಳಾಗಿರುತ್ತಾಳೆ. ಇವುಗಳಲ್ಲಿರುವ ವಿಚಾರಧಾರೆಯನ್ನು ಬರೀ ಹಾಡುವುದ ಕ್ಕಲ್ಲದೆ, ನಮ್ಮ ಜೀವನದಲ್ಲಿ ಬರುವ ಪ್ರತಿಯೊಂದು ಸಂದರ್ಭಗಳಲ್ಲೂ ಅನುಸಂಧಾನ ಮಾಡಿದ್ದೇ ಆದರೆ ಸಾರ್ವಜನಿಕವಾಗಿ, ಸಾರ್ವತ್ರಿಕವಾಗಿ, ಸಾರ್ವಕಾಲಿಕವಾಗಿ ಕಾಡುವ ಹಿಂದಿನ ಶೋಕ, ಇಂದಿನ ಮೋಹ, ಮತ್ತು ಮುಂದಿನ ಭಯದಿಂದ ಮುಕ್ತರಾಗಿ, ಬದುಕಿರುವಾಗಲೇ (ಈ ಮನುಷ್ಯ ಜನ್ಮದಲ್ಲೇ) ಜೀವನ್ಮುಕ್ತ ಭಾವವನ್ನು ಹೊಂದಬಹುದು.

✍ ಲಲಿತಾ ರಮೇಶ್  
9945199637



# ವಿದ್ಯಾರ್ಥಿ ಲಕ್ಷಣಗಳು

ಮಾನವ ಜೀವನದಲ್ಲಿ ವಿದ್ಯಾರ್ಥಿ ಜೀವನವು ಅತೀ ಅಮೂಲ್ಯವಾದುದು. ಒಬ್ಬ ವಿದ್ಯಾರ್ಥಿ ತನ್ನ ವಿದ್ಯಾರ್ಥಿ ಜೀವನದಲ್ಲಿ ಹೇಗಿರುತ್ತಾನೆ ಎಂಬುದರಿಂದ ಅವನ ಮುಂದಿನ ಜೀವನವು ನಿರ್ಧಾರವಾಗುತ್ತದೆ. ಆದ್ದರಿಂದ ವಿದ್ಯಾರ್ಥಿ ಜೀವನವು ಅತಿ ಮುಖ್ಯ. ಹಾಗಾದರೆ ಒಬ್ಬ ವಿದ್ಯಾರ್ಥಿಯ ಲಕ್ಷಣಗಳೇನು? ಅದಕ್ಕೆ ಉತ್ತರವಾಗಿ ಹಿರಿಯರು ಈ ಮಾತನ್ನು ಹೇಳಿದ್ದಾರೆ.

**ಕಾಕದೃಷ್ಟಿ, ಬಕಧ್ಯಾನಂ**
**ಶ್ವಾನನಿದ್ರಾ ತಥೈವಚ**
**ಅಲ್ಪಾಹಾರಿ ಮಲಿನವಸ್ತ್ರಂ**
**ವಿದ್ಯಾರ್ಥಿ ಪಂಚಲಕ್ಷಣಂ ॥**

'ಕಾಕದೃಷ್ಟಿ' ಕಾಗೆಯಂಥ ಸೂಕ್ಷ್ಮವಾದ ದೃಷ್ಟಿ, ನೆಲದಲ್ಲಿ ಚಿಕ್ಕ ತಿಂಡಿಯ ಚೂರಿದ್ದರೂ ಅದನ್ನು ಪತ್ತೆ ಹಚ್ಚಿ ತಿನ್ನುವ ಸಾಮರ್ಥ್ಯ, ಸೂಕ್ಷ್ಮತೆ ಕಾಗೆಗಿದೆ. ಅಂಥ ಸೂಕ್ಷ್ಮತೆಯನ್ನು ವಿದ್ಯಾರ್ಥಿಯಾದವನು ಮೈಗೂಡಿಸಿಕೊಳ್ಳಬೇಕು.

'ಬಕಧ್ಯಾನ'–ಎಂದರೆ ಕೊಕ್ಕರೆಯಂಥ ಏಕಾಗ್ರತೆಯ ಧ್ಯಾನ. ಕೊಕ್ಕರೆಗೆ ನೀರಿನಲ್ಲಿ ಒಂಟಿ ಕಾಲಿನಲ್ಲಿ ಅಚಲವಾಗಿ ನಿಂತು, ಏಕಾಗ್ರತೆಯಿಂದ ನೀರನ್ನು ನೋಡುತ್ತಿರುತ್ತದೆ. ಎಷ್ಟೇ ಚಿಕ್ಕ ಮೀನು ಬಂದರೂ ಅದರ ಏಕಾಗ್ರತೆಯ ದೃಷ್ಟಿಗೆ. ಅದು ಕಂಡೇ ಕಾಣುತ್ತದೆ. ಇಂಥ ಏಕಾಗ್ರತೆಯನ್ನು ವಿದ್ಯಾರ್ಥಿಯಾದವನು ವಿದ್ಯಾಭ್ಯಾಸದಲ್ಲಿ ತೋರಿಸಬೇಕು.

'ಶ್ವಾನ ನಿದ್ರಾ' ಎಂದರೆ ನಾಯಿಗಿರವಂಥ ಜಾಗೃತಿ ಮನಸ್ಸಿನ ನಿದ್ದೆ, ಎಷ್ಟೇ ಸಣ್ಣ ಸಪ್ಪಳವೂ ನಾಯಿಯನ್ನು ಎಚ್ಚರಿಸುತ್ತದೆ. ವಿದ್ಯಾರ್ಥಿಯಾದವನು, ಇಂಥ ಜಾಗೃತಿಯ ಮನಸ್ಸಿನ ನಿದ್ರೆಯನ್ನು ಮಾಡಬೇಕೇ ವಿನಃ ಕುಂಭಕರ್ಣನಂಥ ಗಾಢ ನಿದ್ರೆಯನ್ನಲ್ಲ.

'ಅಲ್ಪಾಹಾರಿ' ಅಂದರೆ ಮಿತವಾದ ಆಹಾರ. ವಿದ್ಯಾರ್ಥಿಯಾದವನು ಹೊಟ್ಟೆಗೂ ಮನಸ್ಸಿಗೂ ಹಿತವಿರುವಂಥ ಸಾತ್ವಿಕ, ಆಹಾರವನ್ನು ಸೇವಿಸಬೇಕು.

'ಮಲಿನ ವಸ್ತ್ರಂ' ಅಂದರೆ ಕೊಳೆಯಾದ ಬಟ್ಟೆಯನ್ನು ಧರಿಸಬೇಕೆಂದಲ್ಲ. ವಿದ್ಯಾರ್ಥಿಯು ತನ್ನ ಬಟ್ಟೆ ಬರೆಗಳಿಗೆ ಶೃಂಗಾರಕ್ಕೆ ಪ್ರಾಶಸ್ತ್ಯ ಕೊಡಬಾರದೆಂದು ಹಿರಿಯರ ಸಲಹೆ. ಈ ಐದು ವಿಷಯಗಳನ್ನು ಪಾಲಿಸುವ ವಿದ್ಯಾರ್ಥಿಯು ಸಫಲತೆಯ ಹಾದಿಯಲ್ಲಿ ನಡೆಯುತ್ತಾನೆಂದು ಹಿರಿಯರು ಹೇಳುತ್ತಾರೆ.

"ಆಲಸ್ಯಂಹಿ ಮನುಷ್ಯಾನಂ ಶರೀರಸ್ಥೋ ಮಹಾನ್‌ರಿಪುಃ" ಎಂಬ ಒಂದು ಮಾತಿದೆ. ಆಲಸ್ಯವೆಂಬುದು ಮನುಷ್ಯನ ಶರೀರದಲ್ಲಿರುವ ದೊಡ್ಡ ಶತ್ರು. ಅದನ್ನು ವಿದ್ಯಾರ್ಥಿ ಜೀವನದಲ್ಲಿ ಚಿವುಟಿ ಹಾಕಬೇಕು.

'ವಿದ್ಯಾ ದದಾತಿ ವಿನಯಂ' ಎಂಬಂತೆ ವಿದ್ಯಾರ್ಥಿ ದೆಸೆಯಲ್ಲೇ ವಿನಯವನ್ನು ಮೈಗೂಡಿಸಿಕೊಳ್ಳಬೇಕು.

ಮೇಲಿನ ಎಲ್ಲಾ ಲಕ್ಷಣಗಳನ್ನು ಅಳವಡಿಸಿಕೊಂಡು 'ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು' ಎಂಬಂತೆ ಉತ್ತಮ ಪ್ರಜೆಗಳಾಗಿ ದೇಶವನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಎಸ್. ಶ್ರೀನಿವಾಸಯ್ಯ
ಕಿತ್ತಗಾನಹಳ್ಳಿ
7899318098



# ಗಾಯನ ಗಂಗಾ

'ಗಾಯನ ಗಂಗಾ' ಸಂಗೀತಕ್ಕೆ ಮೀಸಲಾದ ಒಂದು ಮಾಸಪತ್ರಿಕೆ. ಇದು ಉತ್ತರಾದಿ ಮತ್ತು ದಕ್ಷಿಣಾದಿ ಎರಡೂ ಸಂಗೀತದ ಹಾಡುಗಳು. ಗೀತೆ, ಸ್ವರ, ಸಾಹಿತ್ಯ, ಸಂಗೀತಗಾರರ ಜೀವನ ಚರಿತ್ರೆ, ದಾಸರ ಕೃತಿ, ವಾಗ್ಗೇಯಕಾರರ ಕೃತಿ, ಭಜನೆಗಳು ಎಲ್ಲವನ್ನೂ ಒಳಗೊಂಡು ತಿಂಗಳಿಗೊಮ್ಮೆ ಹೊರಬರುತ್ತಿತ್ತು.

ಸತತವಾಗಿ 50 ವರ್ಷಗಳು ಏನೂ ತೊಂದರೆ ಇಲ್ಲದೆ ಗಾಯನ ಗಂಗಾ ಪತ್ರಿಕೆ ನಡೆದುಕೊಂಡು ಬಂದಿತು. ಇದಕ್ಕೆ ಸರಕಾರದ ಮಾನ್ಯತೆ, ಅನುದಾನ ಎಲ್ಲವೂ ದೊರಕಿತ್ತು. ಇದು ಶ್ಲಾಘನೀಯ ವಿಚಾರ. ವಿದ್ಯಾರ್ಥಿಗಳಿಗೆ ತುಂಬಾ ಪ್ರಯೋಜನವಾಗಿತ್ತು. ಪತ್ರಿಕೋದ್ಯಮದಲ್ಲಿರುವವರಿಗೆ ಪತ್ರಿಕೆಯಾಗಲೀ, ಪೇಪರ್ ಆಗಲೀ ಹೊರತರುವುದು ಎಷ್ಟು ಕಷ್ಟ ಸಾಧ್ಯವಾದದ್ದು ಎಂದು ತಿಳಿದಿರುತ್ತದೆ.

ನನ್ನ ತಂದೆ ಎ.ವಿ. ವೆಂಕಟಕೃಷ್ಣ ಮತ್ತು ಇವರ ಸಹೋದರ ಸಂಬಂಧಿಗಳಾದ ಪಂಡಿತ್ ಶೇಷಾದ್ರಿ ಗವಾಯ್. ಅವರ ಸಹಭಾಗಿತ್ವದಲ್ಲಿ ಈ ಪತ್ರಿಕೆ ಪ್ರಾರಂಭವಾಗಿ ಐವತ್ತು ವರ್ಷಗಳ ಕಾಲ ಚೆನ್ನಾಗಿಯೇ ನಡೆದುಕೊಂಡು ಬಂದಿತ್ತು. ಸಂಗೀತಕಾರರ, ಸ್ನೇಹಿತರ, ಗಣ್ಯವ್ಯಕ್ತಿಗಳ ಸಹಕಾರವೂ ಚೆನ್ನಾಗಿತ್ತು. ಎ.ವಿ. ವೆಂಕಟಕೃಷ್ಣ ಮತ್ತು ಪಂಡಿತ್ ಆರ್.ವಿ. ಶೇಷಾದ್ರಿ ಗವಾಯ್ ಅವರದ್ದು ಗುರು–ಶಿಷ್ಯರ, ಅನ್ಯೋನ್ಯ ಸ್ನೇಹ ಸಂಬಂಧವಿತ್ತು. ಇವರ ಅನ್ಯೋನ್ಯತೆಗೆ ಸಾಕ್ಷಿಯೆಂದರೆ ಗಾಯನಗಂಗಾ 50 ವರ್ಷ ನಡೆದುಕೊಂಡು ಬಂತು ಮತ್ತು ಎ.ಎಸ್.ವಿ. ಪ್ರಿಂಟಿಂಗ್ ಪ್ರೆಸ್, ಅರವಿಂದ ಸಂಗೀತ ವಿದ್ಯಾಲಯ ಎಲ್ಲವೂ ಸರಾಗವಾಗಿ ಮುಂದುವರೆಯಿತು.

ಕಾಲ ಕ್ರಮೇಣ ನನ್ನ ತಂದೆ ವತ್ಸರವರಿಗೆ ವಯಸ್ಸಾದಾಗ ಅನಾರೋಗ್ಯದಿಂದ ಮುದ್ರಣಾಲಯ, ಪತ್ರಿಕೆ ಕಡೆಗೆ ಗಮನ ಕಡಿಮೆಯಾಯಿತು. ಮನಸ್ಸಿನ ಒತ್ತಡ, ಕಾಲು ನೋವು ಎಲ್ಲ ಇದ್ದರೂ ಸಹ ಬಹಳ ಕಷ್ಟದಿಂದ ಕಾರ್ಯ ನಿರ್ವಹಿಸುತ್ತಿದ್ದರು. ಶೇಷಾದ್ರಿಗಳು ಒಬ್ಬರೇ ನಿರ್ವಹಿಸಲು ಕಷ್ಟವಾಗುತ್ತಿತ್ತು. ಪತ್ರಿಕೆಯು 2–3 ತಿಂಗಳಿಗೊಮ್ಮೆ ಬಂದು ನಂತರ ಸ್ವಲ್ಪ ದಿನದಲ್ಲಿ ನಿಂತೇ ಹೋಯಿತು.

1979ರಲ್ಲಿ ನನ್ನ ತಂದೆಯವರು ನಿಧನರಾದರು. ಗಾಯನ ಗಂಗಾ, ನೂತನ ವಿದ್ಯಾಯ, ಮುದ್ರಣಾಲಯ, ವತ್ಸ–ಚೇಚಿ ಇವೆಲ್ಲವೂ ಒಂದಕ್ಕೊಂದು ನಿಕಟ ಸಂಪರ್ಕದಿಂದ ಬೆಸೆದುಕೊಂಡಿದ್ದವು. ಇವರಿಬ್ಬರ ಸರಳ, ಸಜ್ಜನಿಕೆಯ ವ್ಯಕ್ತಿತ್ವ, ಆದರಣೀಯ ಮತ್ತು ಅನುಕರಣೀಯವಾಗಿ ಅಷ್ಟು ಗಟ್ಟಿಯಾದ ಸಂಬಂಧದಿಂದ ಕೂಡಿತ್ತು. ಪಂಡಿತ್ ಶೇಷಾದ್ರಿಯವರ ನಿದನದ ನಂತರ ಎಲ್ಲವೂ ತಟಸ್ಥವಾಗಿಬಿಟ್ಟವು.

ಇಬ್ಬರೂ ಬಹಳ ಹಾಸ್ಯ ಪ್ರವೃತ್ತಿಯುಳ್ಳವರು. ಇವರ ಸ್ನೇಹಿತರು, ಬಂಧುಗಳು ಎಲ್ಲರಿಗೂ ಇದು ಅನುಭವ ವೇದ್ಯ. ನಮ್ಮ ಬೃಹಚ್ಚರಣ ಬಂಧುಗಳಿಗೂ ಚಿರಪರಿಚಿತರಾಗಿದ್ದರು. ಈಗ ಎಲ್ಲ ಒಂದು ನೆನಪು ಮಾತ್ರವಾಗಿಬಿಟ್ಟಿದೆ. ವತ್ಸ–ಚೇಚಿ ಇಬ್ಬರೂ ನನ್ನ ತಂದೆ ಮತ್ತು ಗುರುಗಳು. ಇವರಿಬ್ಬರಿಗೂ ಇದೇ ನನ್ನ ಶ್ರದ್ಧಾಂಜಲಿ ಮತ್ತು ಭಾಷ್ಪಾಂಜಲಿ.

ತಮ್ಮ ಕೈಲಿ ಸಾಧ್ಯವಾಗುವ ತನಕ ಪತ್ರಿಕೆ ನಡೆಸಿದ ನನ್ನ ತಂದೆ ಮತ್ತು ಶೇಷಾದ್ರಿ ಗವಾಯಿಗಳದು ಒಂದು ಸಾಹಸ ಕಾರ್ಯವೆಂದೇ ಹೇಳಬಹುದು.



ಗಾಯತ್ರಿ ಶೇಷಾಚಲ
9449730073

# ಶ್ರೀ ವಿನಾಯಕ




**ಬ**ಹಳ ಪುರಾತನ ಕಾಲ ದಿಂದಲೂ 'ವಿನಾಯಕ' ಅಥವಾ 'ವಿಘ್ನೇಶ್ವರ'ನಿಗೆ ಹಿಂದೂ ಧರ್ಮವನ್ನು ಪಾಲಿಸು ವವರೂ ಮತ್ತು ಹಿಂದೂ ಮತದ ನಂತರ ಹುಟ್ಟಿಕೊಂಡ ಇತರ ಧರ್ಮ ದವರೂ ಬಹಳ ಪ್ರಾಮುಖ್ಯತೆ ಯನ್ನು ಕೊಟ್ಟಿದ್ದಾರೆ. ಇದಲ್ಲದೆ, ವಿನಾಯಕನಿಗೆ ಯಾವ ಕೆಲಸ ಕಾರ್ಯಗಳನ್ನು ಪ್ರಾರಂಭಿಸುವ ಮುಂಚೆ ಅಥವಾ ಬೇರೆ ಪೂಜೆಗಳನ್ನು ಮಾಡುವ ಮುಂಚೆ, ಪ್ರಥಮ ಪೂಜೆ ಸಲ್ಲಿಸಿ, ಅವನ ಅನುಗ್ರಹ ಪಡೆಯುವುದು ವಾಡಿಕೆಯಾಗಿದೆ. ವಿನಾಯಕನನ್ನು 'ವಿಘ್ನೇಶ್ವರ' ಎಂಬ ನಾಮಾಂಕಿತದಿಂದ ಕರೆಯುವುದೇ ಇದರ ಅರ್ಥ. ತಾತ್ವಿಕವಾಗಿ ಹೇಳುವುದಾದರೆ, ಎಲ್ಲಾ ಗ್ರಹಚಾರ ದೋಷಗಳಿಗೂ ವಿನಾಯಕನ ಆರಾಧನೆ ಮಾಡಿದರೆ ಪೂರ್ಣ ಪರಿಹಾರ ದೊರೆಯುವುದೆಂದು ನಂಬಿಕೆ ಮತ್ತು ಇದು ಸತ್ಯದ ಮಾತು.

ವಿನಾಯಕನನ್ನು 'ಗಜಾನನ'ನೆಂದು ಕರೆಯುವುದರ ಹಿನ್ನೆಲೆಯಲ್ಲಿ ಒಂದು ಸ್ವಾರಸ್ಯ ಕಥೆ ಇದೆ. ಶಿವನ ಅರ್ಧಾಂಗಿಯಾದ ಪಾರ್ವತಿ ದೇವಿಯು ಸ್ನಾನಕ್ಕೋಸ್ಕರ ಹೋಗುವ ಮೊದಲು, ಬಾಗಿಲಲ್ಲಿ ಒಂದು ಅರಿಶಿನ ಬೊಂಬೆಯನ್ನು ಮಾಡಿ, ಅದಕ್ಕೆ ಶಕ್ತಿಯನ್ನು ಕೊಟ್ಟು ನಿಲ್ಲಿಸಿದ್ದಳು. ಶಿವನು ಬಂದು, ಬಾಗಿಲಲ್ಲಿ ನಿಂತ ಅಪರಿಚಿತ ಬಾಲಕನನ್ನು ತಳ್ಳಿಕೊಂಡು ಮುಂದೆ ನುಗ್ಗಲು ಆಗಲೇ ಇಲ್ಲ. ನಂತರ, ಶಿವನು ಕೋಪದಿಂದ ಆ ಬಾಲಕನ ಶಿರಚ್ಛೇದನ ಆಡಿ ಒಳಗೆ ಹೋಗಲು ಪಾರ್ವತಿಯ ರೋಧನವನ್ನು ನೋಡಿ ಶಿವನೇ ಕಂಗಾಲಾದನು. ಆಮೇಲೆ ವಿಷಯಗಳೆಲ್ಲವನ್ನೂ ತಿಳಿದ ನಂತರ, ಶಿವನು ಪಾರ್ವತಿಯ ಕೋರಿಕೆಯ ಮೇರೆಗೆ ಉತ್ತರ ದಿಕ್ಕಿನಲ್ಲಿ ತಲೆಯನ್ನು ಇಟ್ಟುಕೊಂಡು ಮಲಗಿದ್ದ ಗಜದ ತಲೆಯನ್ನು ಕಡಿದು ತಂದು, ಪಾರ್ವತಿಯು ಬಾಲಕನ ಮುಂಡಕ್ಕೆ ಜೋಡಿಸಿ, ಪಾರ್ವತಿಗೆ ಸಂತಸವನ್ನು ಕೊಟ್ಟನು. ಇದರಿಂದ ಅಹಂಕಾರ ತುಂಬಿದ್ದ ಗಜಾಸುರನ ಸಂಹಾರವೂ ಆದಂತಾಯಿತು. ಹಾಗೆ ಬೆಳೆದ ಮಗುವೇ 'ಗಜಾನನ' ಅಥವಾ 'ಗಜೇಶ್ವರ'. ಈಶ್ವರನ ಅಪ್ಪಣೆ ಮೇರೆಗೆ, 'ಎಲ್ಲಾ ಗಣಗಳಿಗೂ ದಿಗ್ಗಜನಾದ ವಿನಾಯಕನೇ ಒಡೆಯನೆಂದು' ಶಿವನು ನಿಶ್ಚಯಪಡಿಸಿದನು.

ವಿನಾಯಕನ ಆಕಾರವು ಸೊಂಡಿಲಿನ ಜೊತೆಗೆ ಈ ರೀತಿ ಇದೆ. ಎಡಕೈಯಲ್ಲಿ ಪಾಶವಿದೆ. ನಮ್ಮ ಬಂಧನದ ಚಿಹ್ನೆ 'ಪಾಶ', ಅಂದರೆ ಆತ್ಮಭಾವದಿಂದ ಕಲಾತೀತನೂ, ಸರ್ವವ್ಯಾಪಕನೂ ಮತ್ತು ಪರಮ ಜ್ಞಾನಿಯೂ ಅವನು. ವಿನಾಯಕನ ಬಲಕೈಯಲ್ಲಿ ಅಂಕುಶವಿದೆ. ಅಂದರೆ, ಅವನು ಅಂತರ್ಮುಖ ನಾಗಿಯೂ, ಆತ್ಮಾರಾಮಿಯಾಗಿಯೂ, ಭಕ್ತರ ಕಷ್ಟಗಳ ನಿವಾರಣೆಗೆ ಬದ್ಧನಾಗಿದ್ದಾನೆ. ವಿಘ್ನೇಶ್ವರನ ಇನ್ನೊಂದು ಎಡಕೈಯಲ್ಲಿ ಮೋದಕವಿದೆ. ಅರ್ಥಾತ್ ಆನಂದ. ಅಂದರೆ ಸ್ವಾರ್ಥದ ಬದುಕಿಗಿಂತ, ಪರೋಪಕಾರ ಜೀವನ ಮುಖ್ಯ. ಲೋಕ ಹಿತಕ್ಕಾಗಿ ಬದುಕುವುದರಲ್ಲಿ ಪರಮಾನಂದವಿದೆ. ಹೀಗೆ ಮನಸ್ಸನ್ನು ಅಂತರ್ಮುಖವನ್ನಾಗಿ ಮಾಡಿಕೊಂಡು ಪರಹಿತಕ್ಕಾಗಿ ಬದುಕುವವನು, ಜನನ–ಮರಣಗಳೆಂಬ ಪಾಶದಿಂದ ಬಿಡುಗಡೆ ಹೊಂದಿ, ಅಭಯವೆಂಬ ಪ್ರತಿಷ್ಠೆಯನ್ನು ಗಳಿಸುತ್ತಾನೆ. ಇದು ಗಣೇಶನ ಅಭಯ ಹಸ್ತದ ಸಂಕೇತ.

ಗಣೇಶನ ವಾಹನ ಇಲಿ. ಇದು ಮನಸ್ಸನ್ನು ಪ್ರತಿನಿಧೀಕರಿಸುತ್ತದೆ. ದೇಹ ಭಾವನೆಗಳನ್ನು ಮರೆತು, ಆತ್ಮ ನಿಷ್ಠೆಯಲ್ಲಿ ನಿಂತವನಿಗೆ ಮನಸ್ಸಿಗೆ ಬರುವ ಸುಖ ದುಃಖಗಳೆಲ್ಲಾ ತೃಣ ಅಥವಾ ಇಲಿ ಸಮಾನ. ಆತ್ಮಜ್ಞಾನಿಗೆ ಜೀವನದ ಜಂಜಾಟಗಳು ಏನೂ ಮಾಡಲಾರವು ಎಂಬ ಅರ್ಥ. ಹಿಂದೂ ಧರ್ಮದಲ್ಲಿ ಎಲ್ಲಾ ಪ್ರಾಣಿಗಳಿಗೂ ಸರಿ ಸಮಾನತೆ ಕೋರುವ ರೀತಿಯಲ್ಲಿ ಗಣೇಶನ ಇಲಿಯ ವಾಹನ ಒಂದು ಉದಾಹರಣೆ. ಇಲ್ಲಿ ಭಗವಂತನ ದಶಾವತಾರಗಳನ್ನು ಕೂಡ ನೆನೆಸಿಕೊಳ್ಳಬಹುದು.

ಗಣೇಶನು, ತಂದೆ ತಾಯಿಗಳ ಸ್ಥಾನ ಯಾವುದೆಂದು ಪ್ರಪಂಚಕ್ಕೆ ತೋರಿಸಿದ ಒಂದು ಸಂದರ್ಭ ಕಥೆಯ ರೂಪವಾಗಿದೆ. ಶಿವ ಪಾರ್ವತಿಯರು ತಮ್ಮ ಇಬ್ಬರು ಮಕ್ಕಳಿಗೆ, ನಾರದರು ಕೊಟ್ಟ ಒಂದು ಮಾವಿನ ಹಣ್ಣನ್ನು ಅರ್ಧರ್ಧ ಹಂಚಲಾಗದೆ, ಗಣೇಶ ಅಥವಾ ಷಣ್ಮುಗ ಈ ಇಬ್ಬರು ಪ್ರಪಂಚವನ್ನು ಯಾರು ಬೇಗನೆ ಪರ್ಯಟನೆ ಮಾಡಿ ಬರುವರೋ, ಅವರಿಗೆ ಆ ಹಣ್ಣನ್ನು ಕೊಡುವುದಾಗಿ ತೀರ್ಮಾನ ಮಾಡಿದರು. ಷಣ್ಮುಗನು ಪ್ರಪಂಚವನ್ನೆಲ್ಲಾ ಸುತ್ತಿ ಬರುವುದಕ್ಕೆ ಮೊದಲೇ, ಗಣೇಶನು ತನ್ನ ತಂದೆ ತಾಯಿಯರನ್ನು ಒಂದು ಸುತ್ತು ಸುತ್ತಿ, ತನ್ನ ಭೂ ಪ್ರದಕ್ಷಿಣೆ ಮುಗಿಯಿತೆಂದು ಕೈ ಮುಗಿದು ನಿಂತನು. ಗಣೇಶನ ಪ್ರಪಂಚ ಜ್ಞಾನ ಎಷ್ಟಿತ್ತೆಂದರೆ, ನಿಜ ಸ್ವರೂಪದಿಂದಿರುವ ಆದಿಶಕ್ತಿಯೇ ಪಾರ್ವತಿ ದೇವಿ ಮತ್ತು ಜಗತ್ ಸೃಷ್ಟಿಕರ್ತನಾದ ಶಂಕರರೇ, ತಾಯಿ ತಂದೆಯಾಗಿರುವಾಗ, ನಿಜ ಪ್ರಪಂಚ ಪರ್ಯಟನೆ ನಿಷ್ಪ್ರಯೋಜಕವೆಂದು ಎಲ್ಲರಿಗೂ ತಿಳಿಯುವ ರೀತಿಯಲ್ಲಿ ಪಾಠ ಕಲಿಸುವ ತಳಹದಿಯನ್ನು ಹಾಕಿಕೊಟ್ಟನು. ಭಕ್ತಿ ಮತ್ತು ಜ್ಞಾನ ಸಂಕೇತವಾದ ಹಣ್ಣು ಗಣೇಶನಿಗೆ ಸೇರಿದ್ದು, ನಿಜವಾಗಿ ಆಶ್ಚರ್ಯವೇನಿಲ್ಲ. ಅಹಂಕಾರ ರಹಿತನಾದ, ಶಾಂತಿ ಸ್ವರೂಪಿಯಾದ ಗಣೇಶನು ಪರರ ಹಿತಕ್ಕಾಗಿ, ಬದುಕುವ ಆನಂದ ಜೀವನದ ದಿವ್ಯ ಸಂದೇಶವನ್ನು ಗಾಂಭೀರ್ಯಯುತ ವಿಗ್ರಹದ ಮೂಲಕ ಸಾರುತ್ತಿದ್ದಾನೆ.

ಇದರ ಸಾರಾಂಶ ಈ ಶ್ಲೋಕದಲ್ಲಿ ಅಡಗಿದೆ

**ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।**
**ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪ ಶಾಂತಯೇ ॥**

ಭಾರತದ ಹಿಂದೂಗಳು ಮತ್ತು ಇತರ ದೇಶಗಳಲ್ಲಿ ನೆಲೆಸಿರುವ ಹಿಂದೂ ಜನಾಂಗದವರು ಪ್ರತಿವರ್ಷವೂ ಸ್ವರ್ಣಗೌರಿ ವ್ರತ ಮತ್ತು ಗಣೇಶ ಹಬ್ಬಗಳನ್ನು ಭಾದ್ರಪದ ಮಾಸದ ಶುಕ್ಲಪಕ್ಷದ ತೃತೀಯ ಮತ್ತು ಚತುರ್ಥಿ ದಿನಗಳಂದು ಕ್ರಮವಾಗಿ ಆಚರಿಸುತ್ತಾರೆ.

ಮೌದ್ಗಲ ಪುರಾಣಗಳಲ್ಲಿ ಶ್ರೀ ಗಣಪತಿಯ ವಿವಿಧ ಮೂರ್ತಿಗಳ ಬಗ್ಗೆ ಉಲ್ಲೇಖವಿದೆ. ಬಾಲ ಗಣಪತಿ, ಶಕ್ತಿಗಣಪತಿ, ಸಿದ್ಧಗಣಪತಿ, ವಿದ್ಯಾ ಗಣಪತಿ, ಸಂಕಷ್ಟಹರ ಗಣಪತಿ ಎಂಬ ಮೂರ್ತಿಗಳ ಮುಖ್ಯವಾದವು. ಇನ್ನೂ ಕೆಲವು ಮೂರ್ತಿಗಳ ರೂಪ, ವರ್ಣ ಮತ್ತು ಧ್ಯಾನಗಳ ಪ್ರಕಾರ ವಿಂಗಡಿಸಲ್ಪಟ್ಟ ಈ ನಿರ್ಗುಣ ಬ್ರಹ್ಮನನ್ನು, ಅವರವರ ಮನಸ್ಸಿಗೊಪ್ಪುವ ಸ್ವರೂಪದಿಂದ ಆರಾಧಿಸುವ ಭಕ್ತಿ ಪಥದ ಕ್ರಮವಾಗಿದೆ. ಸಂಕಷ್ಟಹರ ಗಣಪತಿ ವ್ರತವನ್ನು ಪ್ರತಿ ತಿಂಗಳೂ ಭಕ್ತರು ತಮ್ಮ ಕಷ್ಟ ನಿವಾರಣೆಗಾಗಿ ಕೃಷ್ಣಪಕ್ಷದ ಚತುರ್ಥಿ ದಿನದಂದು ಪೂಜಿಸಿ, ಉಪವಾಸವಿದ್ದು, ರತ್ರಿ ಚಂದ್ರನ ದರ್ಶನವಾದೊಡನೆ ಊಟವನ್ನು ಮಾಡುವ ಪದ್ಧತಿಯಾಗಿದೆ.

'ವಿಘ್ನೇಶ್ವರ'ನೆಂದರೆ ಯಾವ ಕೆಲಸ ಮಾಡಬೇಕೆಂದರೂ ಅನೇಕ ಅಡಚಣೆಗಳು ಬರುವ ಸಾಧ್ಯತೆಗಳಿವೆ. ಇವೆಲ್ಲವನ್ನೂ ಎದುರಿಸಿ ಆ ಕೆಲಸವನ್ನು ಮಾಡುವ ಮುಂಚೆ ಈ ದೇವರನ್ನು ಪ್ರಾರ್ಥಿಸುವುದು ಸಂಪ್ರದಾಯ. ವಿದ್ಯಾಭ್ಯಾಸವನ್ನು ಪ್ರಾರಂಭಿಸುವ ಮುನ್ನ ಮತ್ತು ಮಧ್ಯಂತರ ವಿದ್ಯಾಭ್ಯಾಸ ಘಟ್ಟಗಳಲ್ಲಿ ವಿದ್ಯಾರ್ಥಿಗಳು 'ವಿದ್ಯಾಗಣಪತಿ'ಯನ್ನು ಪೂಜಿಸುವುದು.

ಹೀಗೆ ಮೇಲೆ ತಿಳಿಸಿರುವಂತೆ, ಪರರ ಹಿತಕ್ಕಾಗಿ ಬದುಕುವ ಆನಂದ ಜೀವನದ, ದಿವ್ಯ ಸಂದೇಶವನ್ನು ಸಾರುತ್ತಿರುವ ಮೂರ್ತಿಯೇ ಗಣಪತಿ. ಅವನ ಆಶೀರ್ವಾದ ಪಡೆಯೋಣ.



ಎಂ.ಪಿ. ರಂಗನಾಥನ್
9480861849

# ಶಂಕರ ಜಯಂತಿ ಸಂಗೀತ ಕಾರ್ಯಕ್ರಮ

ಬೃಹಚ್ಚರಣ ಸಂಘ 'ಶಂಕರ ಜಯಂತಿ' ಪ್ರಯುಕ್ತ ದಿನಾಂಕ 30.4.2017ರಂದು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಆವರಣದಲ್ಲಿ ತನ್ನ ಸಂಘದ ಸದಸ್ಯರಿಂದ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಬಿ.ಎನ್.ಜಿ. ಪ್ರಸಾದ್‌ರವರು ದೇವರ ನಾಮಗಳನ್ನು ಹಾಡಿದ ನಂತರ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸರಸ್ವತಿ ನಟರಾಜನ್ ರವರ ನೇತೃತ್ವದಲ್ಲಿ ಸದಸ್ಯರಾದ ಛಾಯಾ ಭಗವಾನ್, ಶುಭ ಗಾಯತ್ರಿ, ಲಲಿತಾ ರಮೇಶ್, ರಾಧಾ ವೆಂಕಟೇಶ್, ಕೆ.ಎಲ್. ಶಾಂತಾ, ಅರ್ಜುನ ದೇಶಪಾಂಡೆ ಮತ್ತು ಸಂಗಡಿಗರಿಂದ ಶ್ರೀ ಶಂಕರಾಚಾರ್ಯ ವಿರಚಿತ ಸ್ತೋತ್ರಗಳು, ಗುರುಸ್ತುತು, ಸಂಘದ ಸದಸ್ಯೆ ಶ್ರೀಮತಿ ಬಿ.ಈ. ಸೀತಾಲಕ್ಷ್ಮಿ ವಿರಚಿತ ಶ್ರೀ ಶಂಕರರ ಜೀವನ ಚರಿತ್ರೆ ಮುಂತಾದವುಗಳು ಭಕ್ತಿ ಪೂರ್ವಕವಾಗಿ ಮೂಡಿ ನೆರೆದ ಭಕ್ತ ಸಮೂಹಕ್ಕೆ ಮೆಚ್ಚುಗೆಯಾಯಿತು. ಪಕ್ಕವಾದ್ಯದಲ್ಲಿ ಸದಸ್ಯ ವಿದ್ವಾನ್ ಕಾರ್ತಿಕ ರವಿಕುಮಾರ್‌ರವರಿಂದ ಮೃದಂಗ, ಸದಸ್ಯ ವಿದ್ವಾನ್ ರವಿಶಂಕರ್ ಅವರಿಂದ ಘಟ ಹಾಗೂ ಯುವ ಕಲಾವಿದ ಶ್ರೇಯಸ್ ನಂದನ್‌ರವರು ಕೀಬೋರ್ಡ್ ನುಡಿಸಿದರು. ಕಾರ್ಯಕ್ರಮವನ್ನು ಸಂಘದ ಪೋಷಕರಾದ ಶ್ರೀ ಆರ್. ರಮೇಶ್‌ರವರು ನಿರೂಪಿಸಿದರು.



ಸಂಘದ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿಯವರು ಕಾರ್ಯಕ್ರಮದ ವಿವರ ನೀಡಿ ಕಲಾವಿದರನ್ನು ಸಭೆಗೆ ಪರಿಚಯಿಸಿದರು. ಅಂತೆಯೇ ಶಂಕರ ಜಯಂತಿ ಸಭಾದ ಕಾರ್ಯದರ್ಶಿಯುವರಾದ ಶ್ರೀ ಅಶ್ವತ್ಥ ನಾರಾಯಣ ರವರು ಕಲಾವಿದರನ್ನು ಹಾಗೂ ಸಂಘವನ್ನು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಕಲಾವಿದರಿಗೆ ಡಿ.ವಿ.ಜಿ. ಸಂಬಂಧಿಗಳಾದ ಹಿರಿಯ ಸದಸ್ಯ ಶ್ರೀ ಚಂದ್ರಮೌಳಿಯವರು ಹಾಗೂ ಅಧ್ಯಕ್ಷ ಶ್ರೀ ಸೋಮ ಸುಂದರ್‌ರವರು ನೆನಪಿನ ಕಾಣಿಕೆ ನೀಡಿದರು. ಸಂಘದ ಹಿತೈಷಿ ಮಾಜಿ ಮಹಾಪೌರ ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯ ಶ್ರೀ ಕಟ್ಟೆ ಸತ್ಯನಾರಾಯಣರವರು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ ಪೂರ್ಣವಾಗಿ ಭಾಗವಹಿಸಿದ್ದು ಸಂತಸ ತಂದಿತು. ಇದೇ ಸಮಯದಲ್ಲಿ ಶಂಕರ ಸೇವಾ ಸಮಿತಿಯವರಿಂದ ಶ್ರೀ ಶಂಕರಾಚಾರ್ಯರ ಪುತ್ಥಳಿಯ ರಥವನ್ನು ಅಲಂಕರಿಸಿ ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಮಾಡಲಾಯಿತು.



## 2016-17ರ ಹಿರಿಯ ಚೇತನ ಗೌರವ ಪುರಸ್ಕೃತರು

ಶ್ರೀಯುತರಾದ

**ಆರ್.ಎನ್. ಸುಬ್ಬರಾವ್ (ನಟರಾಜ್),** ಲೇಟ್ ಆರ್.ವಿ. ನಂಜುಂಡಯ್ಯ ಮತ್ತು ಸೀತಾಲಕ್ಷ್ಮಮ್ಮನವರ ಪುತ್ರ

**ಕೆ.ಜಿ.ಶ್ರೀನಿವಾಸ್,** ಲೇಟ್ ಬೇಕರಿ ಗೋಪಾಲಯ್ಯ ಮತ್ತು ಗೌರಮ್ಮನವರ ಪುತ್ರ

**ನಾಗಭೂಷಣ ಶಾಸ್ತ್ರಿ ,** ಗುಮ್ಮಳಾಪುರ ಅರುಣಾಚಲಯ್ಯನವರ ಅಳಿಯ

**ಸುಬ್ರಹ್ಮಣ್ಯಂ ಎ.ಎಂ.,** ಅರೆಹಳ್ಳಿ ಎ. ಮುನೀಶ್ವರಯ್ಯ ಹಾಗೂ ಸರೋಜಮ್ಮನವರ ಪುತ್ರ

**ಲಲಿತಾ ಮೂರ್ತಿ,** ಬಿನ್ನಮಂಗಲ ನಾಗೇಂದ್ರನ್, ಅಲಮೇಲಮ್ಮನವರ ಪುತ್ರಿ, ಶ್ರೀನಿವಾಸ್‌ರವರ ಪತ್ನಿ


KORG















ನಮ್ಮವರು

# ಶ್ರೀಯುತ ಬಿ.ಜಿ.ಎಲ್. ಸ್ವಾಮಿ

ಬಸವನಗುಡಿ ಗುಂಡಪ್ಪ ಲಕ್ಷ್ಮೀನಾರಾಯಣಸ್ವಾಮಿಯವರು ಅಗ್ರಗಣ್ಯ ಶ್ರೀಯುತ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ ಮತ್ತು ಭಾಗೀರಥಮ್ಮನವರ ಸುಪುತ್ರ. ಇವರು 05.02.2018ನೇ ಇಸವಿಯಲ್ಲಿ ಹುಟ್ಟಿದರು. ನಂ. 18, ನಾಗಸಂದ್ರ ರಸ್ತೆ (ಇಂದಿನ ಡಿ.ವಿ.ಜಿ. ರಸ್ತೆ) ಇವರ ಜನ್ಮಸ್ಥಳ. ಇವರು ಸಸ್ಯಶಾಸ್ತ್ರಜ್ಞರು. ಇತಿಹಾಸಕಾರರು ಮತ್ತು ಒಳ್ಳೆಯ ಬರಹಗಾರರಾಗಿದ್ದವರು. ಸಂಗೀತದಲ್ಲಿ ಬಹಳ ಆಸಕ್ತಿ ಇತ್ತು ಜೀವನದಲ್ಲಿ ಅವರಿಗೆ ತಿಳುವಳಿಕೆಯಿಲ್ಲದ ವಿಷಯವೇ ಇರಲಿಲ್ಲ. ಎಲ್ಲವನ್ನು ಗ್ರಾಸ್ ರೂಟ್ ಅಂದರೆ ಮೂಲದಿಂದ ತಿಳಿಯುವ ವ್ಯಕ್ತಿ. ತನ್ನ ತಾಯಿಯನ್ನು 5ನೇ ವಯಸ್ಸಿನಲ್ಲೇ ಕಳೆದುಕೊಂಡು ಅಜ್ಜಿ ಮತ್ತು ಸೋದರತ್ತೆಯೊಂದಿಗೆ ಬೆಳೆದರು. 2017–18ನೇ ಇಸವಿಯನ್ನು ಇವರ ಶತಮಾನೋತ್ಸವವೆಂದು ಆಚರಿಸಲಾಗುತ್ತಿದೆ. (2007 ಡಿ.ವಿ.ಜಿ.ಯವರ 130ನೇ ವರ್ಷ)

ಬಾಲ್ಯದಲ್ಲಿಯೇ ಎಲ್ಲ ವಿಷಯದಲ್ಲೂ ಬಹಳ ಆಸಕ್ತಿ ಹೊಂದಿದ್ದವರು. 5ನೇ ವಯಸ್ಸಿನಲ್ಲಿ ಗಿಟಾರ್ ಹಿಡಿದು ನುಡಿಸಿದಂತಹ ಮೇಧಾವಿ. ಅರ್ಧಂಬರ್ಧ ಕಲಿತು ಬೇರೆಯವರಿಗೆ ಗುರುಗಳಾಗಿದ್ದಂತಹ ದಿನಗಳೂ ಇದ್ದವು. ಬಹಳ ಮುಂಗೋಪಿ ಮತ್ತು ತರಲೆ ಸ್ವಭಾವ.


ಇವರ ವಿದ್ಯಾಭ್ಯಾಸ ನ್ಯಾಷನಲ್ ಹೈಸ್ಕೂಲಿನಲ್ಲಿ. ನಂತರ ಸೆಂಟ್ರಲ್ ಕಾಲೇಜಿನಲ್ಲಿ. ಸಸ್ಯಶಾಸ್ತ್ರ ಪದವಿಯನ್ನು ಪಡೆದು ಮೈಸೂರು ವಿಶ್ವ ವಿದ್ಯಾಲಯದಲ್ಲಿ ಸ್ನಾತಕೋತ್ತರ ಮತ್ತು 1947ರಲ್ಲಿ ಡಾಕ್ಟರೇಟ್ ಪದವಿ ಪಡೆದರು. ಇರ್ವಿಂಗ್ ಬೈಲೇಯವರ ನಾಯಕತ್ವದಲ್ಲಿ ಪೋಸ್ಟ್ ಡಾಕ್ಟರೇಟ್ ರಿಸರ್ಚ್ ಅನುಭವವನ್ನು ಅಮೆರಿಕಾದ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಪಡೆದರು.

ಬಹಳ ಸರಳವಾದ ವಸ್ತ್ರವನ್ನು ಅಂದರೆ ಕಾಕಿ ಚಡ್ಡಿ ಮತ್ತು ಜುಬ್ಬವನ್ನು ಧರಿಸುವ ವಾಡಿಕೆ. ಪುಣೆಯಲ್ಲಿ ಸಸ್ಯಶಾಸ್ತ್ರದ ಬಗ್ಗೆ ಒಂದು ಸಂಶೋಧನೆಯ ಸೆಮಿನಾರ್ ನಡೆಯುತ್ತಿತ್ತು. ಇವರು ಆ ಸಂಶೋಧನೆಗೆ ಕರೆಯದಿದ್ದರೂ ಚಡ್ಡಿ ಮತ್ತು ಜುಬ್ಬವನ್ನು ಧರಿಸಿ ಸಂಶೋಧನೆಯಲ್ಲಿ ಭಾಗವಹಿಸಿದರು. ಮಧ್ಯದಲ್ಲಿ ಇವರು ಚರ್ಚೆಯಲ್ಲಿ ಭಾಗವಹಿಸಿದ ಸಮಯದಲ್ಲಿ ಇವರು ಆ ಸಂಶೋಧನೆ ಸರಿಯಲ್ಲವೆಂದು ವಾದಿಸುತ್ತಿರುವಾಗ ಇವರ ವೇಷಭೂಷಣವನ್ನು ಗಮನಿಸಿ ಇವರನ್ನು ಎತ್ತಿ ಆಚೆಗೆ ಬಿಸಾಡಿದ್ದನ್ನು ಕೂಡ ಇಲ್ಲಿ ನೆನೆಸಬಹುದು.

ನಂತರ ಒಂದು ದಿನ ತಂದೆಯವರು ಇವರಿಗೆ ಮದುವೆಯಾಗು ಎಂದು ಹೇಳಿ ಇವರ ಅಭಿಪ್ರಾಯವನ್ನು ಕೇಳಿದರು. ನಿನಗೆ ಯಾವ ತರಹದ ಹುಡುಗಿ ಬೇಕೆಂದು ಕೇಳಿದರು. ಅದಕ್ಕೆ ಇವರು ಯಾವ ಜಾತಿಯ ಹುಡುಗಿ ಯಾದರೂ ಪರವಾಗಿಲ್ಲ. ಒಳ್ಳೆಯ ಸಂಸ್ಕಾರ ಇರಬೇಕು. ಸಸ್ಯಾಹಾರಿ ಆಗಿರಬೇಕು. ಪೂಜೆ ಪುನಸ್ಕಾರ ತಿಳಿದಿರಬೇಕು. ಸಹನೆಯಿಂದ ಬಾಳಬೇಕು ಮತ್ತು ಹಿಂದೂ ದೇಶದ ಭಾಷೆ ತಿಳಿದಿರಬೇಕು ಎಂದು ಹೇಳಿದರು. ಇವರಿಗೆ 23 ಭಾಷೆಗಳು ತಿಳಿದಿದ್ದವು. ಏನೇ ಕಲಿತರೂ ಸಂಪೂರ್ಣವಾಗಿ ತಿಳಿದಿರು ತ್ತಿದ್ದರು. ಹೈದ್ರಾಬಾದಿನಲ್ಲಿದ್ದ ವಸಂತ ಎಂಬ ಹುಡುಗಿಯನ್ನು ಮದುವೆಯಾದರು.

1953ನೇ ಇಸವಿಯಿಂದ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಸ್ಯಶಾಸ್ತ್ರ ಪ್ರಾಧ್ಯಾಪಕ ಮತ್ತು ಪ್ರಾಂಶುಪಲರಾಗಿ ಸೇವೆ ಸಲ್ಲಿಸಿದರು. ಭಾರತಿದಾಸನ್ ವಿಶ್ವವಿದ್ಯಾಲಯದಲ್ಲಿ ಇವರ ಹೆಸರಿನಲ್ಲಿ ಸಸ್ಯಶಾಸ್ತ್ರದ ಸಂಘವನ್ನು ಸ್ಥಾಪಿಸಲಾಯಿತು.

His Primary research area was Plant Anatomy and in particular the structure of connections between plants roots and stem. He discovered a few plant species namely, ASCARINA MAHESHWARI AND SARCANDRA IRVING BAILEY (NAMED AFTER HIS TEACHERS)



1976ರಲ್ಲಿ ಭಾರತ ಸರ್ಕಾರವು ಬೀರ್ಬಲ್ ಸಹಾನಿ ಚಿನ್ನದ ಪದಕವನ್ನು ಕೊಟ್ಟು ಗೌರವಿಸಿತು. ಇವರು ಸಸ್ಯಶಾಸ್ತ್ರದಲ್ಲಿ ಬಹಳ ಪುಸ್ತಕಗಳನ್ನು ಏನೂ ಅರಿಯದ ಜನಗಳಿಗೆ ಅರ್ಥವಾಗುವಂತೆ ಬರೆದರು. ಸಾಮಾನ್ಯವಾಗಿ ಉಪಯೋಗಿಸುವ ಸಸ್ಯಗಳ ಬಗ್ಗೆ ಬಹಳ ಪುಸ್ತಕಗಳನ್ನು ಬರೆದರು.

ಚಿಕ್ಕಂದಿನಿಂದಲೆ ಇವರ ಜೊತೆ ತಂದೆಯ ಸ್ನೇಹಿತರುಗಳಾದ ಹಿರಿಯ ಸಾಹಿತಿಗಳು, ಕವನಕಾರರು, ಸಂಗೀತಗಾರರ ಸಂಪರ್ಕಗಳು ಇದ್ದಿದ್ದರಿಂದ ಒಳ್ಳೆಯ ವಾತಾವರಣದಲ್ಲಿ ಬೆಳೆದು ಇವರಿಗೂ ಬರವಣಿಗೆಯ ಕಲೆಯಲ್ಲಿ ಆಸಕ್ತಿ ಹುಟ್ಟಿತು.


ಹೀಗೆ ಇವರಿಗೆ ಸಾಹಿತ್ಯದ ಕಡೆಗೆ ಗಮನ ಹರಿದು ಬರವಣಿಗೆಯಲ್ಲಿ ಸಮಯವನ್ನು ಕಳೆದರು. ಹಲವಾರು ಪುಸ್ತಕಗಳು ಇವರ ಜೀವನ ಚರಿತ್ರೆಯ ತರಹ ಹೊಂದಾಣಿಕೆಯಾಗುತ್ತಿದ್ದವು. ಇವರ ಬರವಣಿಗೆಯಲ್ಲಿ ಒಂದು ಶೈಲಿ ಎಂದರೆ ಅವರೇ ಅದರ ಒಳಗೆ ಇದ್ದಾರೇನೋ ಎಂದು ಅನ್ನಿಸುತ್ತದೆ. ಕೆಲವು ಪುಸ್ತಕಗಳನ್ನು ಸಿನಿಮಾಗೆ ಅಳವಡಿಸಿಕೊಟ್ಟರು. ಇದರಲ್ಲಿ ಕಾಲೇಜು ತರಂಗ ಬಹಳ ಅಚ್ಚುಕಟ್ಟಾಗಿ ಮೂಡಿಬಂದಿತು.

ಕನ್ನಡ ಮತ್ತು ತಮಿಳು ಭಾಷೆಯ ಮತ್ತು ಸಾಹಿತ್ಯದ ಬಗೆ ಬಹಳ ವ್ಯಾಸಂಗ ಮಾಡಿ ಪುಸ್ತಕಗಳನ್ನು ಬರೆದಿದ್ದಾರೆ. 'ತಮಿಳು ಮತ್ತು ತೆಲುಗಿನ ನಡುವೆ' ಎಂಬ ಪುಸ್ತಕದಲ್ಲಿ ಭಾಷೆ ಮತ್ತು ಅದರ ಮೂಲದ ಬಗ್ಗೆ, ಸಿದ್ಧಾಂತದ ಬಗ್ಗೆ ಅದರಲ್ಲಿನ ತಪ್ಪು ಭಾವನೆಗಳು ಮತ್ತು ನಂಬಿಕೆಗಳ ಬಗ್ಗೆ ವಿವರವಾಗಿ ಬರೆದಿದ್ದರೆ. ತಮಿಳು ಪುಸ್ತಕಗಳನ್ನು ಅನುವಾದಿಸಿದ್ದಾರೆ.

**ಹಸುರು ಹೊನ್ನು** ಎಂಬ ಪುಸ್ತಕಕ್ಕೆ ಕೇಂದ್ರ ಸರ್ಕಾರ 1978ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗೌರವ ನೀಡಿ ಗೌರವಿಸಿತು. ತಂದೆ ಮತ್ತು ಮಗನಿಗೆ ಸಿಕ್ಕಿದ ಗೌರವ ಪ್ರಶಸ್ತಿ ಇದೇ ಮೊದಲು ಈ ಪುಸ್ತಕದಲ್ಲಿ ಕಲಾವಿದ ಮತ್ತು ವಿಜ್ಞಾನಿಯ ಅನುಭವಗಳನ್ನು ಬಹಳ ಅಚ್ಚುಕಟ್ಟಾಗಿ ಹಾಗೂ ಸಸ್ಯಗಳ ಪ್ರಪಂಚ ಮತ್ತು ಬಹಳ ಬೆಲೆ ಬಾಳುವ ಹಾಗೂ ಉಪಯೋಗವಾಗುವ ಗಿಡಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ.

ಇವರ ಕೆಲವು ಪುಸ್ತಕಗಳು ಕಾಲೇಜು ರಂಗ, ಕಾಲೇಜು ತರಂಗ, ಪ್ರಾಧ್ಯಾಪಕನ ಪೀಠದಲ್ಲಿ, ಡೈರಿ ಆಫ್ ಬೊಟಾನಿಸ್ಟ್, ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕಾ, ಪಂಚಕಳಸ ಗೋಪುರ, ಅಮೆರಿಕದಲ್ಲಿ ನಾನು, ಚಿದಂಬರಂ ಮತ್ತು ನಟರಾಜ ಪ್ರಕಟವಾಗಿ ಮೂಡಿ ಬಂದಿದೆ.

2.11.1980ರಂದು ಇವರ ಮರಣ. ಇದಾದ 10 ತಿಂಗಳಿಗೆ ಇವರ ಧರ್ಮಪತ್ನಿ ಮರಣ ಹೊಂದಿದರು. 62ನೇ ವಯಸ್ಸಿನಲ್ಲಿ ಹೃದಯಾಘಾತ ದಿಂದ ಕೊನೆಯುಸಿರೆಳೆದರು. ಹೀಗೆ ಹೇಳಿಕೊಂಡು ಹೋದರೆ ಬಹಳ ವಿಷಯಗಳು ಇದ್ದಾವೆ. ಬಹಳ ವಿಷಯಗಳ ಬಗ್ಗೆ ನೂರಾರು ಪುಸ್ತಕಗಳನ್ನು ಬರೆದಿದ್ದಾರೆ. ಎಲ್ಲವನ್ನೂ ಓದಿ ಆನಂದಿಸಿ.



ಶ್ರೀನಿವಾಸಮೂರ್ತಿ
9449445311

## THE BLOOMING FLOWER

You were born with a seed
To the ground underneath
To bloom as a beautiful flower
And Shine brightly in future

Let the rain shower more
So that you grow taller and taller
You sing, you sense you breathe
you are a beautiful flower

You give us the fragrance
and spread the fragrance in the atmosphere
you go red, yellow blue
And that's just soo good



You broom very morning
and look beautiful every evening
you sing, you, since you breathe
you are a beautiful flower

**Meghana S.**
(D/o Sonia & Shivaram)

### ಉಪನಯನ

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ. ಶ್ರೀ ಶಂಕರ್ ಪ್ರಸಾದ್ ಶ್ರೀಮತಿ ನಂದಿನಿಯವರ ಪುತ್ರ ಚಿ. ಅಜಯ್ ಆತ್ರೇಯ ಬಿ.ಎಸ್.ನ ಉಪನಯನವು ತಾರೀಖು 16.6.17ರಂದು ನೆರವೇರಿತು.

* * *

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎಸ್. ರಮೇಶ್‌ರವರ ಮೊಮ್ಮಗ ಸದಸ್ಯ ಶ್ರೀ ಚಂದ್ರಶೇಖರ್ ಭಾರದ್ವಾಜ್ ಶ್ರೀಮತಿ ಸುಷ್ಮಾರವರ ಪುತ್ರ ಚಿ. ಶ್ರೀರಾಂ ಭಾರದ್ವಾಜ್‌ನ ಉಪನಯನವು ದಿನಾಂಕ 30.04.2017ರಂದು ನೆರವೇರಿತು.

### ಷಷ್ಠಿಪೂರ್ತಿ ಶಾಂತಿ

ಸಂಘದ ಸದಸ್ಯ ಶ್ರೀ ರವಿ ಮತ್ತು ಶ್ರೀಮತಿ ವಸುಮತಿ ರವಿಯವರ ಷಷ್ಠಿಪೂರ್ತಿ ಶಾಂತಿಯು ತಾ. 15.6.2017ರಂದು ನೆರವೇರಿತು.

### ನೂತನ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಅಭಿನಂದನೆಗಳು

ಶ್ರೀಯುತರಾದ
ಕೆ. ಗುಂಡಪ್ಪ
ಟಿ.ಎನ್. ರವಿಕಿರಣ್
ಸುನಿಲ್ ವಿಜಯಕುಮಾರ್

## ವಾರ್ತಾಚಿತ್ರ



ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಬಿ. ಸುಬ್ರಹ್ಮಣ್ಯಂರವರ ಮಗ ಶ್ರೀನಿವಾಸ್ ಪ್ರಸಾದ್ ಅಮೆರಿಕಾದಲ್ಲಿ ಪಿಎಚ್.ಡಿ. ಪದವಿ ಗಳಿಸಿರುತ್ತಾರೆ.



ಸದಸ್ಯ ಶ್ರೀ ಶಿವಕುಮಾರ್ ನಟರಾಜನ್‌ರವರು ಚಿತ್ರಕಲಾ ಪರಿಷತ್ತಿನಲ್ಲಿ ಮೇ 28, 29ರಂದು ನಡೆದ ಸ್ಥಿರ ಛಾಯಾಚಿತ್ರ ಪ್ರದರ್ಶನದಲ್ಲಿ ತಮ್ಮ ಖಾಜಿರಂಗ ಅರಣ್ಯಧಾಮದ ಛಾಯಾಚಿತ್ರಕ್ಕೆ 'ಉತ್ತಮ ಛಾಯಾಚಿತ್ರ' ಪ್ರಶಸ್ತಿ ಗಳಿಸಿರುತ್ತಾರೆ.



ಸಂಘದ ಮಹಾಪೋಷಕರಾದ ಶ್ರೀಯುತ ಇಟ್ಟಂಗೂರು ಕೃಷ್ಣಮೂರ್ತಿ ಶ್ರೀಕಂಠೇಶ್ವರ್‌ರವರ ಪುತ್ರ ಡಾ. ಪ್ರವೀಣ್‌ಕುಮಾರ್‌ರವರು ಪ್ರಸ್ತುತ ಬೆಂಗಳೂರು ಮೆಡಿಕಲ್ ಕಾಲೇಜಿನ ನರರೋಗ ವಿಭಾಗದ ತಜ್ಞ ಹಾಗೂ ಮುಖ್ಯಸ್ಥರಾಗಿದ್ದಾರೆ. ಶ್ರೀಯುತರಿಗೆ ಯುವ ವಿಜ್ಞಾನಿ ಎಂದು ಮೈಸೂರಿನಲ್ಲಿ ಕರ್ನಾಟಕ ಅಸೋಸಿಯೇಷನ್ ಆಫ್ ಫಿಸಿಷಿಯನ್ ಪ್ರಶಸ್ತಿಗಳಿಸಿರುತ್ತಾರೆ.

# ಮಕ್ಕಳಿಗಾಗಿ ಲೆಕ್ಕಗಳು

1. ಒಮ್ಮೆ ನಾನು 300 ಕಿ.ಮೀ. ದೂರವಿರುವ ಒಂದು ಪಟ್ಟಣಕ್ಕೆ ಹೋಗಬೇಕಾಗಿಬಂದಿತು. ನಾನು ಹೋಗುವಾಗ 5 ಗಂಟೆಗಳ ಸಮಯವನ್ನು ತೆಗೆದುಕೊಂಡೆ. ಬರುವಾಗ ಕಾರನ್ನು ಸ್ವಲ್ಪ ನಿಧಾನವಾಗಿ ಚಲಿಸುತ್ತಾ ಗಂಟೆಗೆ 50 ಕಿ.ಮೀ. ವೇಗದಲ್ಲಿ ಪ್ರಯಾಣಿಸಿದೆ. ನಾನು ಹೋಗಿ ಬರಲು ಮಾಡಿದ ಪ್ರಯಾಣದ ಸರಾಸರಿ ವೇಗ ಎಷ್ಟು?

2. ಸಮರ್ಥ್‌ಗೆ ಕ್ರಿಕೆಟ್ ಆಟವೆಂದರೆ ಬಹಳ ಇಷ್ಟ. ಅವನು ಕಳೆದ ನಾಲ್ಕು ಮ್ಯಾಚುಗಳಲ್ಲಿ ಕ್ರಮವಾಗಿ 45, 32, 60 ಮತ್ತು 52 ರನ್ನುಗಳನ್ನು ಗಳಿಸಿರುತ್ತಾನೆ. ಅವನ ಸರಾಸರಿ ರನ್ನುಗಳ ಸಂಖ್ಯೆ 50 ಆಗಬೇಕಾದರೆ ಅವನು ಐದನೆಯ ಪಂದ್ಯದಲ್ಲಿ ಎಷ್ಟು ರನ್ನುಗಳನ್ನು ಗಳಿಸಬೇಕು?

3. ಹತ್ತು ಬಾರಿ ಸಂಖ್ಯೆ '8'ನ್ನು ಉಪಯೋಗಿಸಿ 1001 ಬರುವಂತೆ ಮಾಡಬೇಕು. ಪ್ರಯತ್ನಿಸಿ.

4. ಶ್ರೀಹರಿ ಮತ್ತು ಶ್ರೀನಿಧಿ ಅಣ್ಣ ತಮ್ಮಂದಿರು. 10 ವರ್ಷಗಳ ಮುಂಚೆ ಶ್ರೀಹರಿಯ ವಯಸ್ಸು ಶ್ರೀನಿಧಿಯ ವಯಸ್ಸಿನ ಎರಡರಷ್ಟಿತ್ತು. ಈಗ ಶ್ರೀನಿಧಿಯ ವಯಸ್ಸು ಅವನ ಅಣ್ಣನಾದ ಶ್ರೀಹರಿಯ ವಯಸ್ಸಿನ ಮುಕ್ಕಾಲು ಭಾಗದಷ್ಟಿದೆ. ಹಾಗಾದರೆ ಈಗ ಅವರಿಬ್ಬರ ವಯಸ್ಸು ಎಷ್ಟು?

5. ರಮೇಶ ಮತ್ತು ಸುರೇಶನ ಬಳಿ ಒಟ್ಟು 800 ರೂಪಾಯಿಗಳಿವೆ. ಅವರಿಬ್ಬರೂ ಒಂದು ಅಂಗಡಿಗೆ ಹೋಗಿ ಪೆನ್ನು, ಪೆನ್ಸಿಲ್ ಮತ್ತು ರಬ್ಬರನ್ನು ಕೊಳ್ಳಲು ಬಯಸುತ್ತಾರೆ. ಒಂದು ಪೆನ್ನಿನ ಬೆಲೆ ರೂ. 12, ಪೆನ್ಸಿಲಿನ ಬೆಲೆ ರೂ. 8 ಮತ್ತು ರಬ್ಬರಿನ ಬೆಲೆ ರೂ. 6 ಆಗಿರುತ್ತದೆ. ಅವರಿಬ್ಬರೂ ಸೇರಿ ಮೂರು ವಸ್ತುಗಳನ್ನು ಪ್ರತಿ ವಸ್ತುವೂ ಕಡೆಯ ಪಕ್ಷ ಒಂದಾದರೂ ಇರುವಂತೆ ಮತ್ತು ಎಲ್ಲ ವಸ್ತುಗಳೂ ಸೇರಿ ಅವುಗಳ ಸಂಖ್ಯೆ 100 ಆಗಬೇಕಾದರೆ ಯಾವ್ಯಾವ ವಸ್ತುವನ್ನು ಎಷ್ಟೆಷ್ಟು ಕೊಳ್ಳಬೇಕು?

**5 ಸರಿ ಇದ್ದರೆ : ಅತ್ಯುತ್ತಮ, 3–4 ಸರಿಯಿದ್ದರೆ ಉತ್ತಮ, 1–2 ಸರಿ ಇದ್ದರೆ ಮಧ್ಯಮ, ಒಂದೂ ಸರಿ ಇಲ್ಲದಿದ್ದರೆ ಹೆಚ್ಚಿನ ಶ್ರಮ ಅಗತ್ಯ.**



**ಬಿ.ಈ. ಗೋವಿಂದ್**
**9167762988**

**ಉತ್ತರಗಳು :**
1) 54.54 ಕಿ.ಮೀ., 2) 61 ರನ್ನುಗಳು, 3) 888+88+8+8+8+(8 8)
4) 20 ಮತ್ತು 15, 5) 20 ಪೆನ್ನು, 40 ಪೆನ್ಸಿಲ್ ಮತ್ತು 40 ರಬ್ಬರ್

# ಅಭಿನಂದನೆ

ಸಂಘದ ಸದಸ್ಯ ಶ್ರೀ ಕೆ.ಬಿ. ಮುರಳಿಯವರ ಪುತ್ರ ಚಿ. ಪ್ರಣವ್ ಎಂ. ಶರ್ಮಾ IISCಯಿಂದ KVPYSB streamನಲ್ಲಿ ರಾಷ್ಟ್ರಮಟ್ಟದಲ್ಲಿ 89ನೇ ರ್‍ಯಾಂಕ್ ಗಳಿಸಿರುತ್ತಾರೆ. ಇವರಿಗೆ ಕೇಂದ್ರ ಸರ್ಕಾರದಿಂದ ಮಾಸಿಕ 5000 ರೂಗಳನ್ನು, ಅಲ್ಲದೆ ವರ್ಷಕ್ಕೆ 20,000 ರೂಗಳನ್ನು 2 ವರ್ಷಗಳ ಕಾಲ ವಿದ್ಯಾರ್ಥಿ ವೇತನವಾಗಿ ಪಡೆಯಲಿದ್ದಾರೆ.

ಚಿ. ಪ್ರಣವ್‌ಗೆ ಸಂಘದ ಅಭಿನಂದನೆಗಳು

## 2016–17ರ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳು

**10ನೇ ತರಗತಿ**
ನಿಶ್ಚಿತ್ ಶಿವಕುಮಾರ್
ಶ್ರದ್ಧಾ ನಾಗಭೂಷಣ್
ಅಪೇಕ್ಷಿತ್ ಕೃಷ್ಣ
ಚೈತ್ರಾ
ಕೌಸ್ತುಬ್ ವಿಶ್ವನಾಥ್
ಅಜಯ್ ಕೃಷ್ಣ

**ಬಿ.ಇ. ಇನ್‌ಫರ್ಮೆಷನ್ ಸೈನ್ಸ್**
ರಮ್ಯಾ ವಿಜಯಕುಮಾರ್

**ಬಿ.ಕಾಂ.**
ಸುಮನ್ ಜಿ. ಕೃಷ್ಣ

**ದ್ವಿತೀಯ ಪಿ.ಯು.ಸಿ.**
ಅಭಿಷೇಕ್ ಎ.
ಯಶಸ್ವಿನಿ ಕೆ.ಎಸ್.
ಶ್ರೀಲಕ್ಷ್ಮಿ ಕೃಷ್ಣ
ಶಾಶ್ವತಿ ಉದಯ್ ರಾಜಾಪುರ
ಸುಕೃತ್ ಎಂ.ಎಸ್.
ಮಾನಸ ಬಿ. ನಾರಾಯಣ್
ಭಾರ್ಗವ್ ಆರ್.ಎಸ್.
ಬೃಂದಾ ಪಿ.

**ಬಿ.ಎ. ಮ್ಯೂಸಿಕ್**
ಸಂಪದ ಗುರುಪ್ರಸಾದ್

### ಹೊಸ ಸದಸ್ಯರು

| | | |
|---|---|---|
| ಶ್ರೀಧರ್ ಎ | 1184 | 1000.00 |
| ರವಿಂದ್ರ ರಾಮ್ ಟಿ ಎನ್ | 1206 | 1000.00 |
| ಕುಮಾರ್ ಆರ್ ಎನ್ | 1228 | 1000.00 |

### ಹೊಸ ಪೋಷಕರು

| | | |
|---|---|---|
| ಮೈತ್ರಿ ರವಿಕುಮಾರ್ | 1139 | 5000.00 |

### ಸದಸ್ಯರಿಂದ ಪೋಷಕರಾದವರು

| | | |
|---|---|---|
| ಬಿ.ಎನ್.ಜಿ. ಪ್ರಸಾದ್ | 1174 | 4000.00 |
| ಬಿ.ಎನ್.ಜಿ. ಕುಮಾರ್ | 1175 | 4000.00 |

### ವಿದ್ಯಾ ನಿಧಿಗೆ ದಾನಿಗಳು

| | | |
|---|---|---|
| ಸೋಮಸುಂದರ್ ಎಸ್ ಮತ್ತು ಕುಟುಂಬ (ತಂದೆ ಸಣ್ಣೇ ಸೂರಪ್ಪನವರ ಹೆಸರಿನಲ್ಲಿ) | 1166 | 21000.00 |
| ಶ್ರೀನಿವಾಸ ಎಸ್.ಸಿ., ರಾಘವಪ್ರಸಾದ್ ಎಸ್.ಸಿ (ತಂದೆ ಚಂದ್ರಶೇಖರಯ್ಯ, ತಾಯಿ ಸತ್ಯವತಿ ಹೆಸರಿನಲ್ಲಿ) | 1162 | 15000.00 |
| ಕಲ್ಯಾಣರಾಮನ್ ಚಂದ್ರಶೇಖರ್ (ತಂದೆ ತಾಯಿ ನೆನಪಲ್ಲಿ) | 1180 | 10000.00 |
| ಶ್ರೀನಿವಾಸನ್ ಎಸ್, ಹೊಸಕೋಟೆ | 1163 | 6000.00 |
| ಮಂಜುನಾರಾಯಣ್ (ತಂದೆ ಟಿ.ಎಸ್. ಕೃಷ್ಣನ್ ನೆನಪಿನಲ್ಲಿ) | 1164 | 6000.00 |
| ಗಣೇಶ್ ಶ್ರೀಧರ್, ಗೋಪಾಲಕೃಷ್ಣ ಆರ್ (ತಂದೆ ತಾಯಿಯ ನೆನಪಲ್ಲಿ) | 1165 | 6000.00 |
| ಸತ್ಯನಾರಾಯಣ್ ಎಸ್ | 1167 | 6000.00 |
| ಅರುಣ್ ವೆಂಕಟಾಚಲಯ್ಯ | 1168 | 6000.00 |
| ಅನಂತ ಕೆ.ಎಸ್. | 1169 | 6000.00 |
| ಕೆ.ಬಿ.ಎಸ್ ಮಣಿ | 1170 | 6000.00 |
| ಬಿ.ಎನ್.ಜಿ. ಪ್ರಸಾದ್ | 1171 | 6000.00 |
| ರಂಗನಾಥ್ ಎಂ.ಪಿ. | 1188 | 1500.00 |
| ಶ್ರೀನಿವಾಸ್ ಕೆ.ಜಿ. | 1193 | 5000.00 |
| ವೆಂಕಟಸುಬ್ಬರಾವ್ ಆರ್.ಎನ್. | 1197 | 500.00 |
| ಸೂರ್ಯನಾರಾಯಣ್ ಬಿ.ಎಸ್. | 1201 | 5000.00 |
| ರವಿಕುಮಾರ್ ಎಸ್ | 1217 | 500.00 |
| ಈಶ್ವರನ್ ಎ | 1225 | 6000.00 |
| ಶ್ರೀನಿವಾಸ (ಎಂ 048) | 1226 | 2000.00 |

## ವಾರ್ಷಿಕ ನಿರ್ವಹಣಾ ಶುಲ್ಕಗಳು

| | | |
|---|---|---|
| ರಮೇಶ್ ಬಾಬು | 1143 | 500.00 |
| ನಾಗರಾಜ್ ಎಸ್ | 1146 | 500.00 |
| ನಾಗೇಶ್ ಎಸ್ | 1147 | 500.00 |
| ಜಯರಾಂ ಕೆ ಸಿ | 1148 | 500.00 |
| ಅರುಣ್ ಜೆ ಕಾರ್ತಿಕ್ | 1149 | 500.00 |
| ಸೋಮಸುಂದರ ಎಸ್ | 1155 | 500.00 |
| ಶ್ರೀನಿವಾಸ ಎಸ್ ಸಿ | 1156 | 500.00 |
| ಸತ್ಯನಾರಾಯಣ್ ಎಸ್ | 1157 | 500.00 |
| ಗಣೇಶ್ ಶ್ರೀಧರ್ ಆರ್. | 1158 | 500.00 |
| ರೂಪಾಶ್ರೀ ಶ್ರೀಧರ್ | 1159 | 500.00 |
| ಮಂಜುನಾರಾಯಣ್ ಕೆ. | 1160 | 500.00 |
| ಮಣಿ ಟಿ ಎಸ್ | 1161 | 500.00 |
| ಶ್ರೀನಿವಾಸನ್ ಎಸ್. | 1172 | 500.00 |
| ಶ್ರೀನಿವಾಸನ್ ಎಸ್. (ಮತ್ತೀಕೆರೆ) | 1173 | 500.00 |
| ಬಿ.ಎನ್.ಜಿ. ಕುಮಾರ್ | 1176 | 500.00 |
| ಬಿ.ಎನ್.ಜಿ. ಪ್ರಸಾದ್ | 1177 | 500.00 |
| ಶಿವಕುಮಾರ್ ಆನೇಕಲ್ | 1178 | 1000.00 |
| ಈಶ್ವರನ್ ಎ | 1179 | 500.00 |
| ಕಲ್ಯಾಣರಾಮನ್ ಚಂದ್ರಶೇಕರ್ | 1181 | 500.00 |
| ಶೇಷಾದ್ರಿ ವಾಸು | 1182 | 500.00 |
| ರಮೇಶ್ ಟಿ ಎಸ್ | 1183 | 500.00 |
| ರಘುನಂದನ್ ಎಸ್ | 1185 | 500.00 |
| ಡಾ. ರಾಮದೇವಿ ಎಸ್ | 1186 | 500.00 |
| ಸತ್ಯಮೂರ್ತಿ ಜಿ ಎಸ್ | 1187 | 500.00 |
| ರಂಗನಾಥ್ ಎಂ ಪಿ | 1189 | 500.00 |
| ಕೃಷ್ಣಮೂರ್ತಿ ಎಸ್ ಎನ್ | 1190 | 500.00 |
| ಬಾಲಸುಬ್ರಮಣಿ ಎಸ್ | 1191 | 500.00 |
| ಶ್ರೀನಿವಾಸ್ ಕೆ ಜಿ | 1192 | 500.00 |
| ಶೇಷಾದ್ರಿ ಬಿ ವಿ | 1194 | 500.00 |
| ಪದ್ಮಾ ಬಿ ವಿ | 1195 | 500.00 |
| ರಾಧಾ ನಾಗಭೂಷಣ | 1196 | 500.00 |
| ವೆಂಕಟಸುಬ್ಬರಾವ್ ಆರ್ ಎನ್ | 1197 | 500.00 |
| ಅನಂತ ಕೆ ಎಸ್ | 1198 | 500.00 |
| ಚಂಪಾಕಧಾಮ ಎಸ್ | 1199 | 500.00 |
| ಮುತ್ತುಸ್ವಾಮಿ ಜಿ | 1200 | 500.00 |
| ಸೂರ್ಯನಾರಾಯಣ್ ಬಿ ಎಸ್ | 1201 | 500.00 |
| ಶ್ರೀನಿವಾಸ್ ಎ ವಿ | 1202 | 500.00 |
| ಸುಬ್ರಮಣ್ಯಮ್ ಎಂ | 1203 | 500.00 |
| ರಾಮಚಂದ್ರನ್ ಟಿ ಎಲ್ | 1204 | 500.00 |
| ಶ್ರೀನಿವಾಸಮೂರ್ತಿ ಸಿ ಎಸ್ | 1205 | 500.00 |
| ವಿಮಲಾ ಜಯರಾಮನ್ | 1207 | 1000.00 |
| ನಾರಾಯಣ್ ಸ್ವಾಮಿ ಕೆ ಎಸ್ | 1208 | 500.00 |
| ರವಿಕಿರಣ್ ಟಿ ಎನ್ | 1209 | 500.00 |
| ಉಮೇಶ್ ಟಿ ಎನ್ | 1210 | 500.00 |
| ರಾಮಸ್ವಾಮಿ ಎ ವಿ | 1211 | 1000.00 |
| ರಂಗನಾಥ್ ಪ್ರಸಾದ್ | 1212 | 500.00 |
| ರಾಮೇಶ್ವರ ಪ್ರಸಾದ್ | 1213 | 500.00 |
| ಜಯರಾಮ್ ಬಿ ವಿ | 1214 | 1000.00 |
| ಸುಂದರ್ ಎನ್ ವಿ | 1215 | 500.00 |
| ವಾಸು ಎಸ್ | 1216 | 500.00 |
| ರವಿಕುಮಾರ್ ಎಸ್ | 1217 | 500.00 |
| ಚೇತನ್ ಹೆಚ್ ಕೆ | 1218 | 500.00 |
| ಸದಾನಂದ ಎಚ್ ಕೆ | 1219 | 500.00 |
| ಶ್ರೀನಿವಾಸ್ ಎಚ್.ಪಿ. | 1220 | 500.00 |
| ಪರಮೇಶ್ವರ ಎಸ್. | 1221 | 500.00 |
| ಶ್ಯಾಮಸುಂದರ್ ಆರ್.ಎ. | 1222 | 500.00 |
| ಶ್ರೀಕಾಂತ್ ಆರ್.ಎ. | 1223 | 500.00 |
| ಬಾಲಸುಬ್ರಮಣಿ ಜಿ.ವಿ. | 1224 | 500.00 |
| ಶ್ರೀಧರ ಮರ್ತಿ ಬಿ.ಪಿ. | 1227 | 500.00 |

## ಅನ್ನದಾನಕ್ಕೆ ದೇಣಿಗೆ

| | | |
|---|---|---|
| ರವಿಕುಮಾರ್ ಎಸ್ | 1140 | 3000.00 |
| ಇಳಾ ಮುದ್ರಣ ಗುರುಮೂರ್ತಿ | 1150 | 894.00 |

## ಹುಂಡಿ ಸಂಗ್ರಹಗಳು

| | | |
|---|---|---|
| ಸುಂದರ್ ಎನ್ ವಿ | 1142 | 1300.00 |
| ಸುಬ್ರಮಣ್ಯಮ್ ಬಿ | 1144 | 1500.00 |

## ಶಂಕರಜಯಂತಿ ಕಾರ್ಯಕ್ರಮಕ್ಕೆ ಪ್ರಾಯೋಜಕರು

| | | |
|---|---|---|
| ಕೆ ಜಿ ವೆಂಕಟೇಶ್ | 1135 | 500.00 |
| ಸರಸ್ವತಿ ನಟರಾಜನ್ | 1136 | 500.00 |
| ಸತ್ಯನಾರಾಯಣ್ ಎಸ್ | 1137 | 500.00 |
| ಮಂಜುನಾರಾಯಣ್ ಕೆ. | 1141 | 3000.00 |
| ಕೆ.ಬಿ.ಎಸ್. ಮಣಿ | 1145 | 500.00 |
| ಸೂರ್ಯನಾರಾಯಣ್ ಬಿ.ಎಸ್. | 1151 | 500.00 |
| ಮಣಿ ವಿ.ಎಸ್. | 1152 | 500.00 |
| ಸೋಮಸುಂದರ ಎಸ್ | 1153 | 500.00 |
| ಗಣೇಶ್ ಶ್ರೀಧರ್ ಆರ್. | 1154 | 500.00 |

### ಅಭಿನಂದನೆ

ಸಂಘದ ಪೋಷಕ ಸದಸ್ಯರಾದ ಶ್ರೀ ಆರ್.ಎಸ್. ರಾಜಗೋಪಾಲ್‌ರವರು ಸಂಘದ ಕಾರ್ಯಚಟುವಟಿಕೆಗಳಿಗೆ 20,000/– ದೇಣಿಗೆ ನೀಡಿ ಮಹಾಪೋಷಕರಾಗಿರುವುದಕ್ಕೆ ಕಾರ್ಯಕಾರಿ ಸಮಿತಿ ಅಭಿನಂದಿಸುತ್ತದೆ.



### ಮರೆಯಾದ–ಮರೆಯಲಾಗದವರಿಗೆ ಸಂಘದ ಶ್ರದ್ಧಾಂಜಲಿ

*ಶ್ರೀಯುತರಾದ*

| | |
|---|---|
| ಸುನಂದಮ್ಮ | 25.03.2017 |
| ಕೃಷ್ಣಸ್ವಾಮಿ ಎಚ್. | 20.04.2017 |
| ಎಸ್.ಎಸ್. ಅಯ್ಯರ್ | 10.05.2017 |
| ಶಾರದಮ್ಮ ವೆಂಕಟೇಶ್ | 25.05.2017 |
| ಎನ್.ಎಸ್. ಸತ್ಯನಾರಾಯಣ್ | 13.06.2017 |
| ಶ್ರೀನಿವಾಸನ್ (ಬಾಟ್ಲಿಬಾಯ್) | 01.07.2017 |
| ಜಯಮ್ಮ ಅಟ್ಟೂರು ಕೃಷ್ಣಮೂರ್ತಿ | 12.07.2017 |

## ಓದುಗರ ಪತ್ರಗಳು



### ಶಂಕರಜಯಂತಿ ಕಾರ್ಯಕ್ರಮ

*ಸಂಪಾದಕರಿಗೆ*

ಸಂಘದ ವತಿಯಿಂದ 'ಶ್ರೀ ಶಂಕರ ಜಯಂತಿ' ದಿನದಂದು, 30.04.2017, ಭಾನುವಾರ ಸಂಜೆ ಸಂಗೀತ ಕಾರ್ಯಕ್ರಮವು ಬಹಳ ಅಮೋಘವಾಗಿತ್ತು. ಅಲ್ಲಿ ಭಾಗವಹಿಸಿದ್ದ ಎಲ್ಲಾ ಕಲಾವಿದರಿಗೂ ನನ್ನ ವಂದನೆಗಳು. ದೇವಸ್ಥಾನದ ವತಿಯಿಂದ ಶ್ರೀ ಶಂಕರರ ಉತ್ಸವವೂ ಬಹಳ ಅದ್ದೂರಿಯಾಗಿ ನಡೆಸಿದರು. ಅವರ ಕೋರಿಕೆಯಂತೆ ಪ್ರತಿವ ವರ್ಷವೂ ನಮ್ಮ ಸಂಘದ ವತಿಯಿಂದ ಸಂಗೀತ ಕಾರ್ಯಕ್ರಮವೂ ನಡೆಸಿದರೆ ಬಹಳ ಸಂತೋಷವಾಗುತ್ತದೆ. ನಮ್ಮ ಸಂಘದ ಸದಸ್ಯರು ಇನ್ನೂ ಕೆಲವರು ಹಾಜರಾಗಿರಲಿಲ್ಲ. ಬಹುಶಃ ಅವರಿಗೆ ಕಾರ್ಯಕ್ರಮದ ಬಗ್ಗೆ ತಿಳಿದಿರಲಿಲ್ಲವೇನೋ?

ಕಾರ್ಯಕ್ರಮದ ನಂತರ ದೇವಸ್ಥಾನದ ವತಿಯಿಂದ ರುಚಿಯಾದ ಪ್ರಸಾದ ವಿನಿಯೋಗವೂ ನಡೆಯಿತು. ದೇವಾಲಯದವರಿಗೆ ನನ್ನ ವಂದನೆಗಳು.

ಈ ಕಾರ್ಯಕ್ರಮದಲ್ಲಿ ಮೊದಲಿಗೆ ಶ್ರೀ ಬಿ.ಎನ್.ವಿ. ಪ್ರಸಾದ್‌ರವರ ದೇವರನಾಮಗಳು ಬಹಳ ಅರ್ಥಗರ್ಭಿತವಾಗಿತ್ತು. ಅವರ ಕಂಠ ವಿದ್ಯಾಭೂಷಣರಂತೆ ಅನಿಸಿತು. ಶ್ರೀಮತಿ ಸರಸ್ವತಿ ನಟರಾಜನ್ ಮತ್ತು ತಂಡದವರ ಸಂಗೀತ ಕಾರ್ಯಕ್ರಮ ಚೆನ್ನಾಗಿತ್ತು. ಶ್ರೀಮತಿ ಶುಭ ಗಾಯತ್ರಿ ಮತ್ತು ಚಿಕ್ಕ ಮಕ್ಕಳೂ ಸಹ ಧನಿಗೂಡಿಸಿದರು. ಈ ಎರಡೂ ಕಾರ್ಯಕ್ರಮಗಳಿಗೆ ಪಕ್ಕವಾದ್ಯ ಮೃದಂಗ ವಿ॥ ಕಾರ್ತೀಕ್ ರವಿ ಕುಮಾರ್, ಘಟಂ ವಿ॥ ರವಿಶಂಕರ್ ಹಾಗೂ ಕಿಬೋರ್ಡ್ ವಿ॥ ಶ್ರೇಯಸ್ ನಂದನ್ ಭಾಗವಹಿಸಿದ್ದು ಕಾರ್ಯಕ್ರಮ ಬಹಳ ಅದ್ದೂರಿಯಾಗಿತ್ತು. ಕಾರ್ಯಕ್ರಮ ನಿರೂಪಣೆ ಮಾಡಿದವರು ಶ್ರೀ ರಮೇಶ್. ಕಲಾವಿದರಿಗೆಲ್ಲಾ ಡಿ.ವಿ.ಜಿ. ಕುಟುಂಬದ ಸದಸ್ಯ ಶ್ರೀ ಚಂದ್ರಮೌಳಿಯವರು ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು.



**ಕೆ. ಗುಂಡಣ್ಣ**



## ಅಕ್ಷರಮಾಲಾ ಸ್ತೋತ್ರ

ಅಖಿಲಾಂಡನಾಯಕಿ ಆದಿಪರಾಶಕ್ತಿ
ಅನ–ಶಶಿ ಲೋಚನೆ ಹೇ ಅಂಬಾ
ಈಶ್ವರಿ–ಶಂಕರಿ ಉಮಾ ಮಹೇಶ್ವರಿ
ಋಷಿಗಣವಂದಿತೆ ಹೇ ಅಂಬಾ ॥ 1 ॥

ಏಕಾಂಬರಪ್ರಿಯೆ ಐಗಿರಿ ಕುಮಾರಿ
ಓಂಖಾರೇಶ್ವರಿ ಹೇ ಅಂಬಾ
ಔದಾರ್ಯಚಿತ್ತೆ ಅಂಬಾಭವಾನಿ
ಆಹ್ಲಾದಜನನೀ ಹೇ ಅಂಬಾ ॥ 2 ॥

ಕನಕಭೂಷಿಣಿ ಗಜಮುಖಜನನಿ
ಚರಚರಾತ್ಮಿಕೆ ಹೇ ಅಂಬಾ ।
ಜಗದಾದಿವಂದಿತೆ ತ್ರಿಲೋಕ ಪೂಜಿತೆ
ದಾಕ್ಷಾಯಿಣಿ ದೇವಿ ಹೇ ಅಂಬಾ ॥ 3 ॥

ನಿತ್ಯ ನಿರ್ಮಲೆ ಪಾರ್ವತಿ ಪರಣಿವೆ
ಫಾಲನೇತ್ರಸತಿ ಹೇ ಅಂಬಾ ।
ಬುಧಜನಸನ್ನುತೆ ಭವಭಯತಾರಿಣಿ
ಮಹಿಷಮರ್ದಿನಿ ಹೇ ಅಂಬಾ ॥ 4 ॥

ಯೋಗಮಾಯೆ ರಾಕ್ಷಸಮರ್ಧಿನಿ
ಲಕ್ಷ್ಮಿ–ವಾಣಿ ಸಖಿ ಹೇ ಅಂಬಾ ।
ವಾಂಛಿತದಾಯಿನಿ ಶಾಲಿನಿ ಶಾರ್ವರಿ
ಷಣ್ಮುಖಜನನಿ ಹೇ ಅಂಬಾ ॥ 5 ॥

ಸಿಂಹವಾಹಿನಿ ಹರ್ಷದಾಯಿನಿ
ಲಕ್ಷಣ ಪರಿಪೂರ್ಣೆ ಹೇ ಅಂಬಾ ।
ಜಯ ಜಯ ವರದೆ ಜಯ ಜಯ ಶುಭದೆ
ಜಯ ಜಯ ಜಯ ಜಯ ಹೇ ಅಂಬಾ ॥ 6 ॥



**ಶುಭಾ ಗಾಯತ್ರಿ**

### ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ದೇಣಿಗೆ

| | |
|---|---|
| ಜಿ.ಪಿ. ಲಕ್ಷ್ಮೀದೇವಿ | 500/– |
| ಕೆ.ಬಿ.ಎಸ್. ಶರ್ಮಾ | 500/– |
| ಭರತ್ ಶರ್ಮಾ | 500/– |

Book-Post

To,

*If un Delivered please return to :*
*President*
**'Brihacharana Sangha'** No. 8, 3rd Cross, Annaiyyappa Block,
Kumarapark West, Bengaluru-560 020.

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com, Ph : 080-26757159